**ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮಿಯಾಪೂರ.**

**ತಾಲೂಕು: ಕುಷ್ಟಗಿ      ಜಿಲ್ಲಾ: ಕೊಪ್ಪಳ**

**ಶಾಲಾ ಡೈಸ್ ಕೋಡ್: 29070411701**

# ಶಾಲೆಯ ಯಶೋಗಾಥೆ

**ಮುಖ್ಯೋಪಾಧ್ಯಾಯರ ಹೆಸರು:**

**ಮೊಹಮ್ಮದ ಖಾಜಾಹುಸೇನ ಒಂಟೆಳಿ**

**ಮೊಬೈಲ್ ನಂಬರ್: 9482959836**

Email ID: kgvanteli@gmail.com

# ಶಾಲೆಯ ಚಿತ್ರಗಳು











ಕನ್ನಡಪ್ರಭ

ಸುದ್ದಿ ಸಿಂಚನ

## ಮಿಯಾಪುರ ಶಾಲೆ ಸಾಧನೆ

**ಹನುಮಸಾಗರ:** ಸಮೀಪದ ಮಿಯಾಪೂರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಗಣಿತ ಆಂದೋಲನದಲ್ಲಿ ಉತ್ತಮ ಸಾಧನೆ ಮಾಡಿದ್ದಕ್ಕಾಗಿ ಅಭಿನಂದನಾ ಪತ್ರ ನೀಡಿ ಗೌರವಿಸಲಾಗಿದೆ.ಕೊಪ್ಪಳದ ಜಿಪಂದಲ್ಲಿ ಇತ್ತೀಚೆಗೆ ನಡೆದ ಜಿಲ್ಲಾ ಮಟ್ಟದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳ ಗಣಿತ ವಿಚಾರ ಸಂಕೀರ್ಣದಲ್ಲಿ ಗಣಿತದಲ್ಲಿ ಉತ್ತಮ ಸಾಧನೆ ಮಾಡಿರುವ ಶಾಲೆಗಳ ಮುಖ್ಯ ಶಿಕ್ಷಕರಿಗೆ ಹಾಗೂ ಎಸ್‌ಡಿಎಂಸಿ ಅಧ್ಯಕ್ಷರಿಗೆ ಅಭಿನಂದನಾ ಪತ್ರ ವಿತರಿಸಲಾ ಯಿತು. ಈ ವೇಳೆ ಮಿಯಾಪುರ ಶಾಲೆಯ ಮುಖ್ಯಶಿಕ್ಷಕ ಖಾಜಾಹುಸೇನ ವಂಟೆಳಿ ಅವರಿಗೆ ಜಿಪಂ ಸಿಇಒ ರಾಹುಲ್ ರತ್ನಂ ಪಾಂಡೆ ಅಭಿನಂದನೆ ಪತ್ರ ವಿತರಣೆ ಮಾಡಿದರು.



VK ವಿಜಯಕರ್ನಾಟಕ e-paper

## ಮಿಯಾಪುರ ಶಾಲೆಗೆ ಅಭಿನಂದನಾ ಪತ್ರ

■ **ವಿಕ ಸುದ್ದಿಲೋಕ** ಹನುಮಸಾಗರ ಸಮೀಪದ ಮಿಯಾಪುರ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಗಣಿತ ಆಂದೋಲನದಲ್ಲಿ ಉತ್ತಮ ಸಾಧನೆ ಮಾಡಿದಕ್ಕಾಗಿ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಕೊಪ್ಪಳದ ಜಿಪಂ.ಯಲ್ಲಿ ಇತ್ತೀಚೆಗೆ ನಡೆದ ಜಿಲ್ಲಾಮಟ್ಟದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗಳ ಗಣಿತ ವಿಚಾರ ಸಂಕೀರ್ಣದ ಶೈಕ್ಷಣಿಕ ವರ್ಷದಲ್ಲಿ ಗಣಿತದಲ್ಲಿ ಉತ್ತಮ ಸಾಧನೆ ಮಾಡಿರುವ ಶಾಲೆಗಳ ಮುಖ್ಯಶಿಕ್ಷಕರಿಗೆ ಹಾಗೂ ಎಸ್ಡಿಎಂಸಿ ಅಧ್ಯಕ್ಷರಿಗೆ ಆಹ್ವಾನಿಸಿ ಅಭಿನಂದನಾ ಪತ್ರ ವಿತರಿಸಲಾಯಿತು. ಇದರಲ್ಲಿ ಮಿಯಾಪುರ ಶಾಲೆಯ ಮುಖ್ಯಶಿಕ್ಷಕ ಖಾಜಾಹುಸೇನ್ ವಂಟೆಳಿ ಅವರಿಗೆ ಜಿಪಂ. ಸಿಇಒ ರಾಹುಲ್ ರತ್ನಂ ಪಾಂಡೆಯ ಅಭಿನಂದನೆ ಪತ್ರ ಸಲ್ಲಿಸಿದರು. ಜಿಲ್ಲಾಧಿಕಾರಿ ನಲಿನ್ ಅತುಲ್ ಹಾಗೂ ಶಿಕ್ಷಣ ಇಲಾಖೆ ಅಧಿಕಾರಿಗಳು, ಅಕ್ಷರ ಫೌಂಡೇಶನ್ ಅಧಿಕಾರಿಗಳು ಭಾಗಿಯಾಗಿದ್ದರು.

ಹನುಮಸಾಗರ ಸಮೀಪದ ಮಿಯಾಪುರ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಗಣಿತ ವಿಷಯದಲ್ಲಿ ಉತ್ತಮ ಸಾಧನೆ ಮಾಡಿದಕ್ಕೆ ಅಭಿನಂದನಾ ಪತ್ರ ನೀಡಿ ಗೌರವಿಸಲಾಯಿತು.

## ದಾಖಲಾತಿ ಹಾಗೂ ಹಾಜರಾತಿ ಆಂದೋಲನ ಕಾರ್ಯಕ್ರಮ

ಮಿಯಾಪೂರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ, ಮಕ್ಕಳ ದಾಖಲಾತಿ ಹಾಗೂ ಹಾಜರಾತಿ ಆಂದೋಲನ ಕಾರ್ಯಕ್ರಮವನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಸುರೇಂದ್ರ ಕಾಂಬಳೆ ಅವರು ಉದ್ಘಾಟಿಸಿ ಮಾತನಾಡಿದರು. ಹಾಗೂ ಊರಿನಲ್ಲಿ ಜಾಥಾವನ್ನು ಹಮ್ಮಿಕೊಳ್ಳಲಾಗಿತ್ತು. ಮಕ್ಕಳು,ಶಿಕ್ಷಕರು, ಎಸ್ಡಿಎಂಸಿ ಯವರು, ಅಂಗನವಾಡಿ ಶಿಕ್ಷಕಿಯರು,ಊರಿನ ಗಣ್ಯರು ಸೇರಿ ಶಿಕ್ಷಣದ ಅರಿವು ಮೂಡಿಸಿ, ಮಕ್ಕಳನ್ನು ತಪ್ಪದೇ ಶಾಲೆಗೆ ಕಳಿಸಲು ಪಾಲಕರಲ್ಲಿ ಜಾಗೃತಿ ಮೂಡಿಸಲಾಯಿತು






ಶಾಲೆಗೆ ಹೋಗೋಣ, ಅಕ್ಷರ ಕಲಿಯೋಣ
ಶಿಕ್ಷಣವೇ ಶಕ್ತಿ
ಕರ್ನಾಟಕ ಸರಕಾರ
ಜಿಲ್ಲಾ ಪಂಚಾಯತ್, ಕೊಪ್ಪಳ
ಶಾಲಾ ಶಿಕ್ಷಣ ಇಲಾಖೆ, ಕೊಪ್ಪಳ
ಹಾಗೂ ಕ್ಷೇತ್ರ ಸಮನ್ವಯಾಧಿಕಾರಿಗಳ ಕಾರ್ಯಾಲಯ,
ಸರಕಾರಿ ಹಿರಿಯ ಪ್ರಾಥಮಿಕ ಶಾಲೆ, ಮಿಯ್ಯಾಪುರ
ತಾ.ಕುಷ್ಟಗಿ ಜಿ.ಕೊಪ್ಪಳ
ಮಕ್ಕಳ ದಾಖಲಾತಿ ಹಾಗೂ ಹಾಜರಾತಿ
ಕಾರ್ಯಕ್ರಮ : 2024-25
ಸರ್ವರಿಗೂ ಹಾರ್ದಿಕ ಸ್ವಾಗತ
ದಿನಾಂಕ: 10-06-2024
ಸ್ವಾಗತ ಕೋರುವವರು :
ಹಾಗೂ ಸರ್ವ ಸದಸ್ಯರು, ಎಸ್‌ಡಿಎಂಸಿ ಹಾಗೂ ಮುಖ್ಯ ಗುರುಗಳು ಹಾಗೂ ಸಿಬ್ಬಂದಿವರ್ಗ












ಶಿಕ್ಷಣವೇ ಶಕ್ತಿ
ಶಾಲಾ ಮಕ್ಕಳ ದಾಖಲಾತಿ ಹಾಗೂ
ಆಂದೋಲನ ಕಾರ್ಯಕ್ರಮ : 2024-
ದಿನಾಂಕ: 10-06-2024

# ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮಿಯಾಪೂರ.

## ಶಾಲೆಯ ಯಶೋಗಾಥೆ ವಿವರ:

ಇಂದಿನ ದಿನಮಾನದಲ್ಲಿ ತನ್ನದೇ ಆದ ಆಕರ್ಷಣೆ, ಸುಂದರ ಪರಿಸರ, ವಿವಿಧ ತಂತ್ರಜ್ಞಾನ ಮೂಲಕ ಬೋಧನೆ, ಸುಸಜ್ಜಿತ ಕಟ್ಟಡ, ಶುದ್ಧ ಕುಡಿಯುವ ನೀರಿನ ಘಟಕ ಒಳಗೊಂಡಂತೆ ಇತರ ಶಾಲಾ ಸೌಲಭ್ಯಗಳಾದ ಶೌಚಾಲಯ, ಉತ್ತಮ ಆಟದ ಮೈದಾನ ಒಳಗೊಂಡಂತೆ ಮಾದರಿ ಶಿಕ್ಷಣ ನೀಡುವಲ್ಲಿ ಶ್ರಮಿಸಲಾಗುತ್ತದೆ.

ಗಣಿತ ಕಲಿಕಾ ಆಂದೋಲನ ಕಾರ್ಯಕ್ರಮದಲ್ಲಿ ಉತ್ತಮ ಸಾಧನೆಗೈದ ಶಾಲೆ, ಮಿಯ್ಯಾಪುರ ಶಾಲೆಗೆ ಜಿಲ್ಲಾ ಹಂತದ ಉತ್ತಮ ಸಾಧನೆಗೆ ಮೆಚ್ಚುಗೆಗೆ ಪಾತ್ರವಾಗಿದೆ.

ಶಾಲೆಯ ಒಳಗೆ ಪ್ರವೇಶಿಸಿದ ಕೂಡಲೇ ನಿಮ್ಮನ್ನು ತೆಂಗಿನ ಮರಗಳು ಸುಂದರವಾದ ದೊಡ್ಡದೊಂದು ಆಲದಮರ ತನ್ನ ನೆರಳು, ವೃಕ್ಷಗಳು, ಹೂವಿನ ಸಸ್ಯಗಳು ಹಲವಾರು ಗಿಡಗಳು ಅಲಂಕಾರಿಕ ಸಸ್ಯ ವರ್ಗ ಕಣ್ಣಿಗೆ ಕಂಗೊಳಿಸುತ್ತವೆ. ಸ್ಮಾರ್ಟ್ ಕ್ಲಾಸ್, ಸ್ಮಾರ್ಟ್ ಬೋರ್ಡ್, ಸ್ಮಾರ್ಟ್ ಟಿವಿ ಗಳು ಜೊತೆಗೆ ನೀಡಬೇಸ್ ಇಂಡಿಯಾ  ಪೂರೈಸಲಪಟ್ಟ ದೂರ ಶಿಕ್ಷಣ ಹಾಗೂ ಕಲಿಕಾ ಟಾಟಾ ಟ್ರಸ್ಟ್ ನ ಪ್ರತ್ಯೇಕ ಗ್ರಂಥಾಲಯ ಹೀಗೆ ಹಲವಾರು ಮಕ್ಕಳಿಗೆ ಅನುಕೂಲಕರವಾಗಿದೆ.

ಬೆಳಗಿನ ಪ್ರಾರ್ಥನೆಯು ಧ್ವನಿವರ್ಧಕದ ಮೂಲಕ ಆರಂಭವಾಗಿ ಮಕ್ಕಳು ಸುಸ್ರಾವ್ಯವಾಗಿ ನಾಡಗೀತೆ, ರಾಷ್ಟಗೀತೆಯನ್ನು ಹಾಡುತ್ತಾರೆ.ಪಂಚಾಂಗ ಪಠಣ, ಅಮೃತವಾಣಿ, ಸುಭಾಷಿತ, ಸಂವಿಧಾನ ಪೀಠಿಕೆ ಪ್ರಸ್ತಾವನೆ ಮತ್ತು ಅನೇಕ ವಚನಕಾರರ ವಚನಗಳನ್ನು ಈ ಸಮಯದಲ್ಲಿ ಹೇಳುವ ಚಟುವಟಿಕೆಗಳನ್ನು ಒಳಗೊಂಡಿದೆ, ನಂತರ ಮಕ್ಕಳು ಹಾಲು ಕುಡಿದು ಕೊಠಡಿಯಲ್ಲಿ ಪ್ರವೇಶಿಸಿದರೆ,ಅಲ್ಲಿ ಅವರಿಗೆ ಪ್ರಾತ್ಯಕ್ಷಿಕೆ ಮತ್ತು ಪ್ರಾಯೋಗಿಕವಾಗಿರುವ ಆಟಗಳು ಕಾದಿರುತ್ತವೆ. ಗಣಿತದ ಕಿಟ್ಟು, ವಿಜ್ಞಾನದ ಕಿಟ್ಟ, ಒಳಗೊಂಡಂತೆ  ವಿವಿಧ ಕಥೆ, ವ್ಯಾಕರಣ– ಕಾವ್ಯಗಳನ್ನು ಪಾಠಗಳು ಸಾಗುತ್ತವೆ.

ಅನೇಕ ಮಾದರಿ ನಕ್ಷೆಗಳನ್ನು ಒಳಗೊಂಡ ತರಗತಿಗಳು ಮಕ್ಕಳಿಗೆ ಹೆಚ್ಚು ಜ್ಞಾನ ಹೆಚ್ಚಿಸುತ್ತದ. ಕಲಿಕಾ ಚಪ್ಪರ, ಕಲಿಕಾ ಕಾರ್ಡುಗಳು ವಿವಿಧ ತಟ್ಟೆಗಳು ಓದುವ ಮೂಲೆಯೊಂದಿಗೆ ಮಗು ಕಲಿಯುತ್ತಾ ಮುಂದುವರಿಯುತ್ತದೆ.

ಸಂಭ್ರಮ ಶನಿವಾರ,ಯೋಗ, ರಾಷ್ಟ್ರೀಯ ಹಬ್ಬಗಳು, ಸರ್ಕಾರದ ಆದೇಶದ ಪ್ರಕಾರ ವಿವಿಧ ದಿನಾಚರಣೆಗಳು ಮಾಡಲಾಗುತ್ತದೆ  ಮಕ್ಕಳಿಗೆ ಕ್ರೀಡಾಕೂಟ,ಪ್ರತಿಭಾ ಕಾರಂಜಿ, ಕಲಿಕೋತ್ಸವ ಜೊತೆಗೆ ಸರ್ಕಾರಿ ಸೌಲಭ್ಯಗಳಾದ ಉಚಿತ ಸಮವಸ್ತ್ರ, ಪಠ್ಯಪುಸ್ತಕ, ಜೊತೆಗೆ ಮಧ್ಯಾಹ್ನದ ಬಿಸಿಊಟ, ಮೊಟ್ಟೆ/ಬಾಳೆ ಹಣ್ಣು/ಸೇಂಗಾಚೆಕ್ಕಿ ಮತ್ತು ಪೋಷಕಾಂಶ ಮಾತ್ರ ಕ್ರಮಬದ್ಧವಾಗಿ ನೀಡಲಾಗುತ್ತದೆ.

ಸಂಗ್ರಹ: ಶ್ರೀ ನಾಗನಗೌಡ ಪೊಲೀಸ್  ಪಾಟೀಲ್ ಶಿಕ್ಷಕರು.

ಈ ಶಾಲೆಯು 1959 ರಲ್ಲಿ ಸ್ಥಾಪನೆಗೊಂಡಿದೆ. ತಾಲೂಕ ಕೇಂದ್ರದಿಂದ 21ಇಟ ದೂರದಲ್ಲಿದೆ. ಪ್ರಸ್ತುತ ಶಾಲೆಯಲ್ಲಿ 4 ಜನ ಖಾಯಂ ಶಿಕ್ಷಕರು 2 ಜನ ಅತಿಥಿ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ. 150 ಮಕ್ಕಳು ವಿದ್ಯಾಭ್ಯಾಸ ಮಾಡುತ್ತಿದ್ದಾರೆ. ಶಿಕ್ಷಕರ, ಗ್ರಾಮಸ್ಥರ, ಪಾಲಕರ ಹಾಗೂ ಅಧಿಕಾರಿಗಳ ಮಾರ್ಗದರ್ಶನದಲ್ಲಿ ಏನೆಲ್ಲಾ ಬದಲಾವಣೆ ಮಾಡಬಹುದಾಗಿದೆ ಎಂಬುದಕ್ಕೆ ಈ ಶಾಲೆಯೇ ಸಾಕ್ಷಿ. ಶಿಕ್ಷಕರು ಶೈಕ್ಷಣಿಕ ಗುಣಮಟ್ಟ ಹೆಚ್ಚಿಸುವ ಸರ್ವ ಪ್ರಯತ್ನವನ್ನು ನಮ್ಮ ಶಾಲೆಯ ಶಿಕ್ಷಕರು ಮಾಡುತ್ತಿದ್ದಾರೆ, ಶಾಲೆಯಲ್ಲಿ ಸ್ಮಾರ್ಟ್ ಕ್ಲಾಸ್, ಪ್ರಯೋಗಾಲಯ, ಪ್ರತ್ಯೇಕ ಗ್ರಂಥಾಲಯ ಇ- ವಿದ್ಯಾಲೋಕ ಶಿಕ್ಷಣ, ಕಲಿಕಾ ಟಾಟಾ ಟ್ರಸ್ಟ್ ನವರ ಪ್ರತ್ಯೇಕ ಗ್ರಂಥಾಲಯ ಶಿಕ್ಷಣ, ಸಮತಟ್ಟಾದ ಕ್ರೀಡಾಂಗಣ, ಸಾಕಷ್ಟು ತೆಂಗಿನ ಮರಗಳು ಇತರೆ ಮರಗಳು ಹೂ -ಬಳ್ಳಿಗಳು ಯಾವಾಗಲೂ, ಕಂಗೊಳಿಸಲು ಉದ್ಯಾನವನದಂತೆ ಕಂಗೊಳಿಸುತ್ತದೆ. ಈ ಶಾಲೆಗೆ ಗ್ರಾಮಸ್ಥರ/ ಶಿಕ್ಷಕ ವರ್ಗದವರ ಪರಿಶ್ರಮ ಸಾಕಷ್ಟಿದೆ. ಹೊಸ ಕಲಿಕೋಪಕರಣಗಳ ಮೂಲಕ ಪಾಠ ಬೋಧನೆ ಮಾಡುತ್ತಿರುವುದರಿಂದ, ಮಕ್ಕಳ ಹಾಜರಾತಿಯು ಅತ್ಯುತ್ತಮವಾಗಿದೆ.

ಪ್ರತಿವಾರ ರಸಪ್ರಶ್ನೆ ಕಾರ್ಯಕ್ರಮ, ಸ್ಪರ್ಧಾತ್ಮಕ ಪರೀಕ್ಷೆಗೆ ಪೂರ್ವ ಸಿದ್ಧತಾ ಪರೀಕ್ಷೆಗಳು ನಡೆಯುತ್ತವೆ. ಯೋಗ, ಕ್ರೀಡೆ ಮಕ್ಕಳ ಶಿಸ್ತು ಪಾಲನೆ, ಪಠ್ಯೇತರ ಚಟುವಟಿಕೆಗಳಲ್ಲಿ ಮಕ್ಕಳು ಆಸಕ್ತಿಯಿಂದ ಭಾಗವಹಿಸುತ್ತಾರೆ. ಬಿಸಿಊಟದ ಕಾರ್ಯಕ್ರಮ ಅತ್ಯುತ್ತಮ ರೀತಿಯಲ್ಲಿ ನಡೆಯುತ್ತಿದೆ, ಬಿಸಿಊಟದ ಸಿಬ್ಬಂದಿಯವರಾದ ಶ್ರೀಮತಿ ಅನ್ನಪೂರ್ಣ ಹಿರೇಮನಿ,ಶ್ರೀಮತಿ ರೇಣಮ್ಮ ಬೇವೂರ ಇವರು ಮಕ್ಕಳಿಗೆ ರುಚಿ-ರುಚಿಯಾದ ಅಡುಗೆ ಮಾಡುತ್ತಾರೆ, ಅವರಿಗೆ ನಮ್ಮ ವಂದನೆಗಳು

**ನಮ್ಮ ಶಾಲಾ ಸಿಬ್ಬಂದಿ ವರ್ಗ**

1. ಶ್ರೀ ಮಹಮ್ಮದ ಖಾಜಾಹುಸೇನ ಒಂಟೆಳಿ ಮುಖ್ಯೋಪಾಧ್ಯಾಯರು

2. ಶ್ರೀ ನಾಗನಗೌಡ ಪೊಲೀಸ್ ಪಾಟೀಲ್ ಸಹಶಿಕ್ಷಕರ

3. ಶ್ರೀಮತಿ ಶಾಂತಾಬಾಯಿ ಪಟ್ಟಣಶೆಟ್ಟಿ

4. ಶ್ರೀ ಪರಶುರಾಮಪ್ಪ ನಾಗಣ್ಣನವರ

5. ಕುಮಾರಿ -ಲಕ್ಷ್ಮಿ ವಾಲಿಕಾರ್ ಅತಿಥಿ ಶಿಕ್ಷಕಿ

6. ಕುಮಾರಿ-ಸುಜಾತ ಗುಡಗಲದ್ದಿನ್ನಿ

**ಮಕ್ಕಳು, ಮೊಬೈಲ್ ಹೆಚ್ಚು ಬಳಸುವುದರಿಂದ ಕಣ್ಣುಗಳಿಗೆ ದುಷ್ಪರಿಣಾಮಗಳ ಜಾಗೃತಿ ಕಾರ್ಯಕ್ರಮ ಮತ್ತು ಮಕ್ಕಳಿಗೆ ಕಣ್ಣು ತಪಾಸಣೆ ಶಿಬಿರ ಹಮ್ಮಿಕೊಳ್ಳಲಾಗಿತ್ತುಹಾಗು ಅರೋಗ್ಯ ತಪಾಸಣೆ.**






S.V.M.V.V. Sangha's
SHRI VIJAY MAHANTESH AYURVEDIC MEDICAL COLLEGE,
PG RESEARCH CENTRE AND RPK AYURVEDIC HOSPITAL, ILKAL
FREE EYE CHECKUP CAMP
BY : DEPARTMENT OF PG STUDIES IN SHALAKYA TANTRA IN ASSOCIATION WITH NSS UNIT OF RGUHS BANGALORE
Place :
Venue :
Date :
Days of The Week
Sunday
Monday
Tuesday
Wednesday
Thursday
Friday


Days of The Week
Sunday
Monday
Tuesday
Wednesday


ಸರಕಾರಿ ಹಿರಿಯ ಪ್ರಾಥಮಿಕ ಶಾಲೆ ಮಿಯ್ಯಾಪುರ
ಪ್ರಾಥಮಿಕ ಆರೋಗ್ಯ ಕೇಂದ್ರ ಚಳಗೇರಾ
ಅತಿಸಾರ ಬೇಧಿ ನಿಯಂತ್ರಣ ಪಾಕ್ಷಿಕ
ಹಾಗೂ ಅನೀಮಿಯ ಮುಕ್ತ ಪೌಷ್ಟಿಕ
ಕರ್ನಾಟಕ ಕಾರ್ಯಕ್ರಮ
ದಿನಾಂಕ 2023
Days of The Week
Sunday
Monday
Tuesday
Wednesday
Thursday
Friday


Strength is Life, Weakness is Death
CHALIGERA


Wednesday
Thursday
Friday
Saturday


Months of the Year
January
July
February
August
September



ಕನ್ನಡಪ್ರಭ

# ಮೊಬೈಲ್ ಬಳಕೆಯಿಂದ ದೃಷ್ಟಿದೋಷ: ಜಗದೀಶಪ್ಪ

• **ಕನ್ನಡಪ್ರಭ ವಾರ್ತೆ** ಹನುಮಸಾಗರ

ಹೆಚ್ಚು ಸಮಯ ಮೊಬೈಲ್ ಫೋನ್ ನೋಡುವುದರಿಂದ ಮಕ್ಕಳ ಕಣ್ಣಿಗೆ ಸಮಸ್ಯೆಯಾಗಲಿದೆ. ಪಾಲಕರು ತಮ್ಮ ಮಕ್ಕಳ ಕೈಗೆ ಮೊಬೈಲ್ ನೀಡದೇ ಪುಸ್ತಕ ಓದುವಂತೆ ತಿಳಿಸಬೇಕು ಎಂದು ಸಮನ್ವಯಾಧಿಕಾರಿ ಜಗದೀಶಪ್ಪ ಎಂ. ಹೇಳಿದರು.

ಸಮೀಪದ ಮಿಯ್ಯಾಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾರ್ಥಿಗಳ ಕಣ್ಣಿನ ತಪಾಸಣೆ ಹಾಗೂ ಮೊಬೈಲ್ ನೋಡುವುದರಿಂದ ಆಗುವ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸಲು ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಮಾತನಾಡಿದರು.

ಗ್ರಾಮಸ್ಥರ ಸಹಕಾರದಿಂದ ಸ್ಮಾರ್ಟ್ ಕ್ಲಾಸ್ ಹಾಗೂ ವಿವಿಧ ಸೌಲಭ್ಯಗಳು ಶಾಲೆಯಲ್ಲಿ ಲಭ್ಯವಿದೆ. ಮಕ್ಕಳು ಮೊಬೈಲ್‌ನ್ನು ಅತಿಯಾಗಿ ಬಳಕೆ ಮಾಡಬಾರದು. ಇದರಿಂದ ಕಣ್ಣಿನ ಸಮಸ್ಯೆ ಎದುರಾಗುತ್ತದೆ. ವಿದ್ಯಾರ್ಥಿಗಳು ಮೊಬೈಲ್ ನೋಡುವುದನ್ನು ಬಿಟ್ಟು ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಿ, ಆಟಗಳಲ್ಲಿ ಭಾಗವಹಿಸಿ ಮನೋರಂಜನೆ ಜೊತೆಗೆ ಆರೋಗ್ಯ ಕಾಪಾಡಿಕೊಳ್ಳಿ, ಮಕ್ಕಳಿಗಾಗಿ ಈ ಜಾಗೃತಿ ಕಾರ್ಯಕ್ರಮ ಹಾಗೂ ಕಣ್ಣಿನ ತಪಾಸಣೆ ಶಿಬಿರ ಏರ್ಪಡಿಸಿದ್ದು ಶ್ಲಾಘನೀಯ ಎಂದರು.

ಮುಖ್ಯಶಿಕ್ಷಕ ಖಾಜಾಹುಸೇನ ಒಂಟೆಳಿ ಮಾತನಾಡಿ, ಮಕ್ಕಳು ಬೇರೆ ಬೇರೆ ಉದ್ದೇಶಗಳಿಗಾಗಿ ಮೊಬೈಲ್ ಬಳಸುತ್ತಾರೆ. ಹೆಚ್ಚು ಹೊತ್ತು ಮೊಬೈಲ್ ನೋಡುವುದರಿಂದ ಕಣ್ಣಿನ ಮತ್ತು ಮೆದುಳಿನ ಮೇಲೆ ಪರಿಣಾಮ ಬೀರುತ್ತದೆ. ಮಕ್ಕಳ ಮಾನಸಿಕ, ದೈಹಿಕ ಬೆಳವಣಿಗೆ ಕೂಡ ದುಷ್ಪರಿಣಾಮ ಬೀರುತ್ತದೆ ಎಂದರು. ಇಳಕಲ್ ವಿಜಯ ಮಹಾಂತೇಶ್ ಆಯುರ್ವೇದಿಕ್ ಮಹಾವಿದ್ಯಾಲಯದ ಉಪ ಪ್ರಾಂಶುಪಾಲ ಪ್ರಕಾಶ ತಾರಿವಾಳ, ಎಸ್ಡಿಎಂಸಿ ಅಧ್ಯಕ್ಷ ನಾಗಪ್ಪ, ಗ್ರಾಪಂ ಉಪಾಧ್ಯಕ್ಷೆ ಶರಣಮ್ಮ ಶರಣಗೌಡ ಮ್ಯಾಗೇರಿ, ಸದಸ್ಯರಾದ ಗವಿಸಿದ್ದಪ್ಪ ಕುದುರಿ ಉಪನ್ಯಾಸಕರಾದ ಡಾ.ವಿನೋದ್ ಜೆ.ಬಿ., ಪ್ರಶಾಂತ ಕಲ್ಲನ ಶೆಟ್ಟಿ, ಡಾ.ಶ್ವೇತಾ ಸಾವಳಗಿ, ಡಾ. ಸುಷ್ಮಾ ಕುಂಬಾರ, ಬಿಆರ್‌ಸಿ ಡಾ.ಜೀವನಸಾಬ ಬಿನ್ನಾಳ, ಅಬುಬೂಕರ ಮುಲ್ಲಾ ಇದ್ದರು. KP




ಹನುಮಸಾಗರ ಸಮೀಪದ ಮಿಯ್ಯಾಪೂರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾರ್ಥಿಗಳಿಗೆ ಉಚಿತ ಕಣ್ಣಿನ ತಪಾಸಣೆ ನಡೆಸಲಾಯಿತು.

KOPPAL Edition
Nov 4, 2023 Page No. 02
Powered by : eReleGo.com

# ಮಕ್ಕಳಲ್ಲಿ ಮೊಬೈಲ್ ಬಳಕೆಯ ದುಷ್ಪರಿಣಾಮ ಕಣ್ಣಿನ ತಪಾಸಣೆ ಹಾಗೂ ಜಾಗೃತಿ ಕಾರ್ಯಕ್ರಮ

**ಕುಷ್ಟಗಿ,ನ.2-** ತಾಲ್ಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮಿಯಾಪುರ, ಗ್ರಾಮದಲ್ಲಿ ವಿದ್ಯಾರ್ಥಿಗಳು ಮೊಬೈಲ್ ನೋಡುವುದರಿಂದ ಆಗುವ ದುಷ್ಪರಿಣಾಮಗಳ ಕುರಿತು ಜಾಗೃತಿ ಹಾಗೂ ಕಣ್ಣುಗಳ ತಪಾಸಣೆ ಶಿಬಿರ ಏರ್ಪಡಿಸಲಾಯಿತು.




ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಜಗದೀಶಪ್ಪ ಎಂ ಸಮನ್ವಯ ಅಧಿಕಾರಿಗಳು ಇವರು ಮಾತನಾಡಿ- ಮಕ್ಕಳೇ, ಗ್ರಾಮದವರ ಸಹಕಾರದೊಂದಿಗೆ ಈಗ ಎಲ್ಲಾ ಸೌಲಭ್ಯಗಳು ಶಾಲೆಗಳಲ್ಲಿ ಇವೆ, ಸ್ಮಾರ್ಟ್ ಕ್ಲಾಸ್ ಮೂಲಕ ಬೋಧನೆಗಳು ಕೂಡ ನಡೆಯುತ್ತವೆ ಆದ್ದರಿಂದ ಹೆಚ್ಚಾಗಿ ಮೊಬೈಲ್ ಫೋನ್ ಬಳಕೆ ಮಾಡಬೇಡಿ ಮೊಬೈಲ್ ನೋಡುವುದರಿಂದ ಕುರುಡುತನ ಬರುವ ಸಾಧ್ಯತೆ ಹೆಚ್ಚು ಕಣ್ಣೇ ಕಾಣದಿದ್ದರೆ ಜಗತ್ತು ನೋಡಲು ಸಾಧ್ಯವಿಲ್ಲ, ಮೊಬೈಲ್ ನೋಡುವುದನ್ನು ಬಿಟ್ಟು ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಿ ಹಾಗೂ ಹೆಚ್ಚಾಗಿ ಆಟಗಳಲ್ಲಿ ಭಾಗವಹಿಸಿ ಮನೋರಂಜನೆ ಜೊತೆಗೆ ಆರೋಗ್ಯವನ್ನು ಕಾಪಾಡಿಕೊಳ್ಳಿರಿ ಈ ಜಾಗೃತಿ ಕಾರ್ಯಕ್ರಮ ಹಾಗೂ ಕಣ್ಣಿನ ತಪಾಸಣೆ ಶಿಬಿರ ಏರ್ಪಡಿಸಿದ್ದು ಶ್ಲಾಘನೀಯ ಎಂದು ಹೇಳಿದರು.

ಪ್ರಾಸ್ತಾವಿಕ ಮಾತನಾಡಿದ ಮುಖ್ಯ ಶಿಕ್ಷಕ ಖಾಜಾಹುಸೇನ ಒಂಟೆಳಿ ಮಾತನಾಡಿ - ಮಕ್ಕಳು ಬೇರೆ ಬೇರೆ ಉದ್ದೇಶಗಳಿಗಾಗಿ ಮೊಬೈಲ್ ಬಳಸುತ್ತಾರೆ ಹೆಚ್ಚು ಹೊತ್ತು ಮೊಬೈಲ್ ನೋಡುವುದರಿಂದ ಇದು ಖಂಡಿತವಾಗಿಯೂ ಅವರ ಕಣ್ಣಿನ ಮತ್ತು ಮೆದುಳಿನ ಮೇಲೆ ಪರಿಣಾಮ ಬೀರುತ್ತದೆ ಮಕ್ಕಳು ಮಾನಸಿಕ ಹಾಗು ದೈಹಿಕ ಬೆಳವಣಿಗೆ ಕೂಡ ದುಷ್ಪರಿಣಾಮ ಬೀರುತ್ತದೆ ಹೀಗಾಗಿ ಮೊಬೈಲ್ ಹೆಚ್ಚು ಹೊತ್ತು ಬಳಸದೆ ಇರುವುದು ಉತ್ತಮ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಪ್ರಕಾಶ ತಾರಿವಾಳ ಉಪ ಪ್ರಾಂಶುಪಾಲರು, ಶ್ರೀ ವಿಜಯ ಮಹಾಂತೇಶ್ ಆಯುರ್ವೇದಿಕ್ ಮಹಾವಿದ್ಯಾಲಯ ಇಳಕಲ್ಲ ಇವರು ಮಾತನಾಡಿ-ಈ ಒಂದು ಕಾರ್ಯಕ್ರಮ ಮಕ್ಕಳಲ್ಲಿ ಜಾಗೃತಿ ಮೂಡಿಸುವುದರ ಜೊತೆಗೆ ಪಾಲಕರಿಗೂ ಇದರ ಜಾಗೃತಿ ಬಹಳಷ್ಟು ಅಗತ್ಯವಾಗಿದೆ ಮಕ್ಕಳು ಹೆಚ್ಚು ಹೊತ್ತು ಮೊಬೈಲ್‌ನ್ನ ಬಳಸದೇ ಇರುವುದು ಉತ್ತಮ. ಇಂತಹ ಶಿಬಿರಗಳು ಹೆಚ್ಚು ಹೆಚ್ಚು ನಡೆಯಬೇಕು. ಕಣ್ಣಿಗೂ ಹಾಗೂ ದೇಹಕ್ಕೂ ಇದು ಬಹಳಷ್ಟು ರೋಗಗಳನ್ನುಂಟು ಮಾಡುತ್ತದೆ ಎಂದರು.ಡಾಕ್ಟರ್ ವಿನೋದ್ ಜೆ ಬಿ ಉಪನ್ಯಾಸಕರು, ಡಾಕ್ಟರ್ ಪ್ರಶಾಂತ್ ಕಲ್ಲನ್ ಶೆಟ್ಟಿ ಉಪನ್ಯಾಸಕರು, ಡಾ. ಜೀವನಸಾಬ ಬಿನ್ನಾಳ, ಬಿ ಆರ್ ಸಿ ಸಂಪನ್ಮೂಲ ವ್ಯಕ್ತಿಗಳು,ಡಾಕ್ಟರ್ ಶ್ವೇತಾ ಸಾವಳಗಿ ಡಾ. ಸುಷ್ಮಾ ಕುಂಬಾರ್, ಅಬುಬೂಕರ ಮುಲ್ಲಾ ಇವರು ಜಾಗೃತಿ ಕುರಿತು ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಸ್ಡಿಎಂಸಿ ಅಧ್ಯಕ್ಷ ನಾಗಪ್ಪ ಇವರು ವಹಿಸಿದ್ದರು.ಮುಖ್ಯ ಅತಿಥಿಗಳಾಗಿ ಶರಣಮ್ಮ ಶರಣಗೌಡ ಮ್ಯಾಗೇರಿ ಉಪಾಧ್ಯಕ್ಷರು ಗ್ರಾಮ ಪಂಚಾಯತ್, ಗವಿಸಿದ್ದಪ್ಪ ಕುದುರಿ ಗ್ರಾಮ ಪಂಚಾಯತ್ ಸದಸ್ಯರು, ಶಿಕ್ಷಕರಾದ ಸದಾಶಿವಯ್ಯ ಹಿರೇಮಠ ನಾಗನಗೌಡ ಪೋಲಿಸ್ ಪಾಟೀಲ್, ಶಾಂತಾಬಾಯಿ ಪಟ್ಟಣಶೆಟ್ಟಿ, ಅಕ್ಕ ಮಹಾದೇವಿ ಹಿರೇಮಠ, ಜಯಶ್ರೀ ಮದ್ನೂರ, ಲಕ್ಷ್ಮೀ ವಾಲಿಕಾರ, ಶಬಾನಾಬೇಗಂ ಹೊಸಪೇಟೆ, ಸುಮಂಗಲಾ ಕುದುರಿ ಮತ್ತು ಪಾಲಕರು, ಹಿರಿಯರು ಉಪಸ್ಥಿತರಿದ್ದರು. ಸದಾಶಿವಯ್ಯ ಹಿರೇಮಠ ಸ್ವಾಗತಿಸಿದರು.

ನಾಗನಗೌಡ ಪೋಲಿಸ್ ಪಾಟೀಲ್ ಕಾರ್ಯಕ್ರಮ ನಿರೂಪಿಸಿದರು, ಶಾಂತಾಬಾಯಿ ಪಟ್ಟಣಶೆಟ್ಟಿ ವಂದಿಸಿದರು.

ಸ್ವಾತಂತ್ರ್ಯ ಹೋರಾಟಗಾರರ,ಗಣ್ಯ ವ್ಯಕ್ತಿಗಳ ಭಾವಚಿತ್ರಗಳು , ಜ್ಞಾನಪೀಠ ಪ್ರಶಸ್ತಿ ವಿಜೇತರು, ನಕಾಶೆಗಳು, ಮತ್ತು ವಿವಿಧ ಬರಹಗಳು ಶಾಲೆಯಲ್ಲಿ ಬರೆಯಿಸಿರುವ ಚಿತ್ರಗಳು






ಗೋವಿಂದ ಪೈ
ಪಂಪ
ಕಾಳಿದಾಸ
ಬಸವಪ್ಪ ಶಾಸ್ತ್ರಿ
ವ್ಯಾಸರಾಜರು
ಕನಕದಾಸರು
ಲಕ್ಷ್ಮೀಶ
ಕುಮಾರವ್ಯಾಸ
Aa Bb Cc Dd Ee
Parts of The Body
Hair
Head
Cheek
Eye
Ear
Nose
Shoulder
Mouth
Jaw
Neck
Chest
Elbow
Waist
Hand
Arm
ಸಂಧಿಗಳು
ಸಂಧಿಗಳು
JUNIOR SET
FRAGILE


ಕಾಗುಣಿತ
ಗೋವಿಂದ ಪೈ
ಪಂಪ
ಕಾಳಿದಾಸ
ವ್ಯಾಸರಾಜರು
ಲಕ್ಷ್ಮೀಶ
Aa Bb
ಪ್ರತಿಮ X
ಪ್ರಸನ್ನ X
ಹಿತ X
ಸುರ X
ಚೇತನ X
ಖಂಡ X ಅಖಂಡ
englishkannada.com
ಶುದ್ಧ X ಅಶುದ್ಧ
ಜನನ X ಮರಣ
ಹುಟ್ಟು X ಸಾವು
ಸಂಧಿಗಳು
ಸಂಧಿಗಳು
JUNIOR SET
ನಾಮಪದಗಳು

**ಶಿಕ್ಷಣ ಬಲವರ್ಧನೆಗಾಗಿ ಕಲಿಕಾ ಟಾಟಾ ಟ್ರಸ್ಟ್ ನವರ ಗ್ರಂಥಾಲಯ ಉದ್ಘಾಟನೆ ಹಾಗೂ ಮಕ್ಕಳು ಪುಸ್ತಕಗಳನ್ನು ಓದುವ ಕಾರ್ಯಕ್ರಮಗಳು**


















**ಅನುಬಂಧ–5**

* ನಲಿ–ಕಲಿ ಮಕ್ಕಳಿಗೆ ಮೂರ್ತರೂಪದ ಚಟುವಟಿಕೆಗಳನ್ನು ನೀಡುವುದು.

  ಉದಾ: ಬೀಜಗಳನ್ನು ಗುಂಪುಗಳನ್ನು ಎಣಿಸುತ್ತಾ ತೆಗೆಯುವುದು.

  ಕಡ್ಡಿಗಳನ್ನು5 ಗುಂಪಿನಂತೆ ರಚಿಸುವುದು.

* ಕಿರಿಯ ಪ್ರಾಥಮಿಕ ಶಾಲಾ ಮಕ್ಕಳಿಗೆ ಗಣಿತದ ಸಾಮರ್ಥ್ಯವನ್ನು ಹೆಚ್ಚಿಸಲು ಮಕ್ಕಳು ಸಂಗ್ರಹಿಸಿದ ಆಟಿಕೆ ಸಾಮಾನುಗಳ ಬೆಲೆಗಳನ್ನು ಹೇಳಿಸುವುದು.
* ಮಕ್ಕಳಿಗೆ ಆರು ಮುಖ ಉಳ್ಳ ಡೈಸ್ನಿಂದ ಸಂಖ್ಯಾ ಪಟ್ಟಿಯ ಚೌಕಳಿಯಿಂದ ಹಾವು ಏಣಿ ಆಟ ಆಡಿಸುವುದು.
* ಐಸ್ ಕ್ರೀಮ್ ಕಡ್ಡಿಗಳ ನಿರ್ದಿಷ್ಟ ಸಂಖ್ಯೆಯ, ಕಟ್ಟುಗಳನ್ನು ಕೊಟ್ಟು, ನಿರ್ದಿಷ್ಟ ವಿದ್ಯಾರ್ಥಿಗಳಿಗೆ ಸಮನಾಗಿ ಹಂಚಲು ತಿಳಿಸುವುದು.
* ಕೆಲವು ನಾಣ್ಯಗಳನ್ನು ಕೊಟ್ಟು ಅವುಗಳನ್ನು ಎಣಿಸಲು ಹೇಳುವುದು ಹಿರಿಯ ವಿದ್ಯಾರ್ಥಿಗಳಿಗೆ ಗಣಿತದ ಸಂಖ್ಯಾ ಸಮರ್ಥ್ಯವನ್ನು ಹೆಚ್ಚಿಸಲು, ತಮ್ಮನ್ನೇ ತಾವು ತೊಡಗಿಸಿಕೊಳ್ಳುವಂತೆ ಮಾಡುವುದು.
* ಮೂರ್ತ ರೂಪದ ವಸ್ತುಗಳನ್ನು ಕೊಟ್ಟು ಸಮ ಮತ್ತು ಬೆಸ ಸಂಖ್ಯೆಗಳನ್ನು ಆಯ್ಕೆ ಮಾಡಲು ತಿಳಿಸುವುದು
* ಉದಾಹರಣೆ: ಕ್ಯಾಲೆಂಡರ್

ಶಾಲೆಯ ಶೈಕ್ಷಣಿಕ ಅಭಿವೃದ್ಧಿಗಾಗಿ ಪಠ್ಯ – ಚಟುವಟಿಕೆಗಳು ಮತ್ತು ಸಹಪಠ್ಯ– ಚಟುವಟಿಕೆಗಳು

ಪಠ್ಯಪುಸ್ತಕದಲ್ಲಿ ಅಭ್ಯಾಸಗಳು ಹಾಗೂ ಚಟುವಟಿಕೆಗಳು ಪ್ರಯೋಗಗಳು ವಿವಿಧ ಮಾದರಿ ಗಳ ನಿರ್ಮಾಣ ಭಾಷೆಯಲ್ಲಿನ ಭಾವಗೀತೆಗಳು ಹಾಗೂ ಕವಿತೆಗಳು, ಕವನಗಳು, ಕರಗತ ಮಾಡಿಕೊಳ್ಳಲು ವಿಡಿಯೋ ಕ್ಲಿಪ್ ಗಳನ್ನು ಬಳಸಿ ವಾಚನ ಮಾಡುವುದು ವೈಜ್ಞಾನಿಕ ಮನೋಭಾವದಿಂದ ವಿಜ್ಞಾನದ ಭಾಗವಹಿಸಿಕೆಯು ಮಕ್ಕಳಲ್ಲಿ ವೈಜ್ಞಾನಿಕ ಮನೋಭಾವನೆಯನ್ನು ಮೂಡಿಸುವುದು.

ಗಣಿತದ ವಿಷಯದಲ್ಲಿ ಸರಳ ಭಾಷೆಯಲ್ಲಿ ಮೂರ್ತ ರೂಪದ ಪರಿಕಲ್ಪನೆಗಳನ್ನು, ಉದಾಹರಣೆಗಳೊಂದಿಗೆ ವಿವರಿಸಿದಾಗ ಮಕ್ಕಳಲ್ಲಿ ತಾರ್ಕಿಕ ಮನೋಭಾವನೆಯನ್ನು ಬೆಳೆಸುವುದರ ಜೊತೆಗೆ, ನಿರ್ದಿಷ್ಟ ಮತ್ತು ನಿಖರತೆ ಮೂಡಿಸಬಹುದು. ಮೂರ್ತ ರೂಪದ ವಸ್ತುಗಳಾದ ಹುಣಸೆ ಬೀಜಗಳು, ಕಲ್ಲು, ಕಡ್ಡಿ, ಡೈಸ್ ಕಾಳುಗಳ, ಆರ್ಡರ್ ಸೀಟುಗಳು, ಹಾರ್ಡ್ ಶೀಟ್ ಗಳು ಹೀಗೆ ಇನ್ನೂ ಹತ್ತು ಹಲವಾರು ವಸ್ತುಗಳನ್ನು ಬಳಸಿಕೊಂಡು ಮಕ್ಕಳಲ್ಲಿ ಸಂಖ್ಯಾ ಸಾಮರ್ಥ್ಯಗಳನ್ನು ಹೆಚ್ಚಿಸಬಹುದು.

**ಸಹ ಪಠ್ಯ ಚಟುವಟಿಕೆಗಳು**

ಸಹಪಠ್ಯ ಚಟುವಟಿಕೆಗಳಲ್ಲಿ ಸರ್ವಾಂಗಣ ಅಭಿವೃದ್ಧಿಯಾಗಲು ಯಾವುದೇ ಸಂದೇಹವೇ ಇಲ್ಲ. ಇಲ್ಲಿ ಬರುವ ಕ್ರೀಡೆಗಳು ವಿವಿಧ ಪ್ರಬಂಧ ಸ್ಪರ್ಧೆಗಳಾಗಿರಬಹುದು, ಮನೋರಂಜಿಸುವ ಕಾರ್ಯಕ್ರಮಗಳಾಗಿರಬಹುದು, ಹೀಗೆ 10 ಹಲವಾರು ಅಂಶಗಳನ್ನು ಇಟ್ಟುಕೊಂಡು ಶಾಲೆಯಲ್ಲಿ ಸ್ಪರ್ಧೆಗಳು ನಡೆಸುವುದರಿಂದ ಮಕ್ಕಳಲ್ಲಿ ಉತ್ಸಾಹ ಹೆಚ್ಚುತ್ತದೆ. ನಮ್ಮ ಶಾಲೆಯ ಮಕ್ಕಳು ಕ್ರೀಡೆ ಮತ್ತು ಪ್ರತಿಭಾ ಕಾರಂಜಿಯಲ್ಲಿ ಜಿಲ್ಲಾ ಮಟ್ಟದವರೆಗೂ ಸ್ಪರ್ಧಿಸಿ ಬಹುಮಾನ ತಂದಿದ್ದಾರೆ.

**ನಲಿ–ಕಲಿ ತರಗತಿಗಳ ಕಲಿಕಾ ಚಟುವಟಿಕೆಗಳ ಪೂರಕ ಪರಿಶೀಲನೆಗೆ (ಕಲಿಕಾ ಟಾಟಾ ಟ್ರಸ್ಟ್ ವತಿಯಿಂದ) ನಮ್ಮ ಶಾಲೆಗೆ'ಹಲಿ, ಜಾರ್ಖಂಡ್ ಮತ್ತು ಮುಂಬೈ ತಂಡಗಳು ವೀಕ್ಷಣೆ ಮಾಡಿ ಮೆಚ್ಚಿಗೆ ವ್ಯಕ್ತಪಡಿಸಿದರು**











APPLE




ದಿಕ್ಕುಗಳು
ಪೂರ್ವ
ಪಶ್ಚಿಮ
ಉತ್ತರ
ದಕ್ಷಿಣ
ಕಾಲಗಳು
ಮಳೆಗಾಲ
ಚಳಿಗಾಲ
January
February
March
April
May
June
July
August
September
October
November
December
ಕೊಪ್ಪಳ
ಗಂಗಾವತಿ
ಯಲಬುರ್ಗಾ
ಕುಷ್ಟಗಿ
Yy
yellow
Zz
box
New Raja Sweets


JANUARY
FEBRUARY
MARCH
APRIL
MAY
JUNE
JULY
WEEKS
SUNDAY
MONDAY
TUESDAY
WEDNESDAY
THURSDAY
FRIDAY
ANIMALS
GOAT
COW
DOG
HORSE
OX
SHEEP
FRUITS
MANGO
ORANGE
APPLE
MUSKMELON
WATER MELON
GUAVA
he was
we were
he has
he will
we are
he is
THE RAINBOW FAMILY
Namma Library
ದಿನಾಂಕ: 28/12/2024
ವಿಷಯ: ಗಣಿತ
43
×2
Hh
hat
Ii
inkpot
Jj
Kk
key
Ll


JANUARY
FEBRUARY
MARCH
APRIL
MAY
JUNE
JULY
AUGUST
SEPTEMBER
OCTOBER
DECEMBER
ಸಂಕಲನ
ಸ್ಥಾನ ಬೆಲೆ
ಸಾವಿರ
ನೂರು
ಹತ್ತು
ಬಿಡಿ
1000
100
10
1
ಗವಿಸಿದ್ದಪ್ಪ


NALI KALI ENGL
MY BODY
ಕನ್ನಡ


ಶನಿವಾರ
ಮಂಗಳವಾರ


FIVE
2000
800
Hh
INK
inkpot
Jj
Kk

**ಮಕ್ಕಳಲ್ಲಿ ಅಡಗಿರುವ ಮೌಢ್ಯತೆ ಹೋಗಲಾಡಿಸಲು ವಿಜ್ಞಾನ ವಸ್ತು ಪ್ರದರ್ಶನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು**






SAVE WATER SAVE LIFE


Aa Bb Cc Dd Ee Ff Gg Hh Ii Jj Kk Ll Mm Nn Oo Pp Qq Rr Ss Tt Uu Vv Ww Xx
Parts of The Body
PRESENT TENSE
WAS - WERE
Compound Words
Short Vowels
Antonyms
Synonyms
Pronouns

## ಅನುಬಂಧ – 6

ಶಾಲೆಯ ಭೌತಿಕ ಪರಿಸರ,ಶಾಲಾ ಮೈದಾನ,ಕುಡಿಯುವ ನೀರು ಮತ್ತು ಶೌಚಾಲಯ ಇತರೆ ಸೌಲಭ್ಯಗಳ ಸಮರ್ಪಕ ಮಾಹಿತಿ

ನಮ್ಮ ಶಾಲೆಯ ಸುಂದರವಾದ ಸುಸಜ್ಜಿತವಾದ ಕಟ್ಟಡವನ್ನು ಹೊಂದಿದ್ದು, ನಮ್ಮ ಶಾಲೆಗೆ ವಿಶೇಷವಾದ ಭೌತಿಕ ಪರಿಸರ ಹೊಂದಿದೆ. ಶಾಲೆಯ ಸುತ್ತ ಸುಂದರವಾದ ಕಾಂಪೌಂಡ್ ಮುಳ್ಳು ತಂತಿಯೊಂದಿಗೆ ಹಾಕಲಾಗಿದೆ, ಶಾಲಾ ಮೈದಾನವು ಚೌಕ ಕೃತಿಯನ್ನು ರೂಪದಲ್ಲಿ ಹಲವಾರು ಹೂವಿನ ಗಿಡಗಳು ಹಾಗೂ ಅಲಂಕಾರಿಕ ಹೂ–ಬಳ್ಳಿಗಳು ಶೃಂಗಾರಗೊಳಿಸಿದಂತೆ ಕಾಣುವ ಹಾಗೆ ಮಾಡಲಾಗಿದೆ. ಒಂದರಂತೆ ಒಂದು ನಾ ಮುಂದು, ನೀ ಮುಂದೆ ಎನ್ನುವ ಹಾಗೆ ತೆಂಗಿನ ಮರಗಳು ಗಗನಚುಂಬಿಸುವಂತೆ ಸಾಗುತ್ತಿವೆ. ತೆಂಗಿನ ಮರಗಳು ಶಾಲಾ ಮೈದಾನವನ್ನು ಕಂಗೊಳಿಸುವಂತೆ ಕಾಣಿಸುತ್ತವೆ, ಅದರಲ್ಲಿ ಹೆಮ್ಮರವಾಗಿ ಬೆಳೆದು ನಿಂತಿರುವ ಅರಳಿ ಮರವು ಮಕ್ಕಳ ದಣಿವನ್ನು ಸಾಕಾರಗೊಳಿಸುತ್ತದೆ. ಹಲವಾರು ಕಾರ್ಯಕ್ರಮಗಳ ವೇದಿಕೆಗೆ ಸಾಕ್ಷಿಯಾಗಿದೆ, ಮಕ್ಕಳಿಗೆ ಅಲ್ಲಿ ಅರಳುವ ಹೂಗಳನ್ನು, ದಿನನಿತ್ಯ ಮಕ್ಕಳು ಬಳಸುತ್ತಾರೆ ಜೊತೆಗೆ ಮಕ್ಕಳ ದೇಹ ಅಭಿವೃದ್ಧಿಗಾಗಿ ಮೈದಾನವನ್ನು ನಮ್ಮ ಶಾಲೆಯ ಹೊಂದಿದೆ.ಈ ಆಟದ ಮೈದಾನದಿಂದ ನಮ್ಮ ಮಕ್ಕಳು ಹಲವಾರು ಹಂತದವರೆಗೂ ತಲುಪಿ ಪ್ರಶಸ್ತಿಗಳನ್ನು ಬಾಚಿಕೊಂಡು ಬಂದಿದ್ದಾರೆ.

**ಶುದ್ಧ ಕುಡಿಯುವ ನೀರು,ಪ್ರತ್ಯೇಕ ಶೌಚಾಲಯಗಳು, ಸ್ವಚ್ಛತೆಗೆ ಆದ್ಯತೆ, ಸಮತಟ್ಟಾದ ಮೈದಾನ, ಶಾಲೆ ಆವರಣದಲ್ಲಿ ಸಾಕಷ್ಟು ಗಿಡ ಮರಗಳು, ಸುಂದರ ತಾಣವಾಗಿ ಕಂಗೊಳಿಸುವ ದೃಶ್ಯಗಳು**







ಸಹಾಯವಾಣಿ
1098/112


ಮಕ್ಕಳ ಸಹಾಯವಾಣಿ
1098/112


ಬಾಲಕರ
ಶೌಚಾಲಯ


ಬಾಲಕಿಯರ
ಶೌಚಾಲಯ


ಶಾಲೆ ಮಿಯಾಪೂರ.







ಮಕ್ಕಳ ಹಕ್ಕುಗಳ ರಕ್ಷಣೆ ಹಾಗೂ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ

ಕನ್ನಡಪ್ರಭ

# ಮಾದಕ ವಸ್ತುಗಳಿಂದ ವಿದ್ಯಾರ್ಥಿಗಳು ದೂರ ಇರಲಿ



ಮಾದಕ ವಸ್ತುಗಳ ದುರುಪಯೋಗ ತಡೆಗಟ್ಟುವಿಕೆ ಕುರಿತು ಜಾಗೃತಿ ಕಾರ್ಯಕ್ರಮ ನಡೆಯಿತು.

• **ಕನ್ನಡಪ್ರಭ ವಾರ್ತೆ** ಹನುಮಸಾಗರ

ಗುಟ್ಕಾ, ತಂಬಾಕು, ಸಿಗರೇಟ್, ಬೀಡಿ, ಗಾಂಜಾ ಮುಂತಾದ ಮಾದಕ ಸೇವನೆಯಿಂದ ದೇಶಾದ್ಯಂತ ಭೀತಿ ಆವರಿಸಿದೆ ಎಂದು ಮುಖ್ಯಶಿಕ್ಷಕ ಖಾಜಾ ಹುಸೇನ ವಂಟೆಳಿ ಹೇಳಿದರು.

ಸಮೀಪದ ಮಿಯ್ಯಾಪುರ ಸರ್ಕಾರಿ ಹಿರಿಯ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಶನಿವಾರ ಮಾದಕ ವಸ್ತುಗಳ ದುರುಪಯೋಗ ತಡೆಗಟ್ಟುವಿಕೆ ಕುರಿತು ಮಕ್ಕಳನ್ನು ಉದ್ದೇಶಿಸಿ ಮಾತನಾಡಿ, ಮದ್ಯಪಾನ, ವಯಸ್ಕರು ಎಂದು ಹದಿಹರೆಯದ ಪೂರ್ವದ ಮಕ್ಕಳು ಸಹ ಇದಕ್ಕೆ ಬಲಿಯಾಗುತ್ತಿದ್ದಾರೆ. ತಿಳಿವಳಿಕೆ ಇಲ್ಲದಿರುವುದು, ಸರಿಯಾದ ನಿರ್ಧಾರ ತೆಗೆದುಕೊಳ್ಳಲು ಸಾಧ್ಯವಾಗದ ಮಕ್ಕಳು ಅಂತಹ ವ್ಯಸನಗಳಿಂದ ದೂರವಿರಬೇಕು. ಮನಸ್ಸು ಮತ್ತು ದೇಹದ ಮೇಲೆ ಮಾದಕ ದ್ರವ್ಯಗಳು ಹಾನಿಕಾರಕ ಪರಿಣಾಮಗಳನ್ನು ಉಂಟು ಮಾಡುತ್ತವೆ. ಮಕ್ಕಳಮಾದಕದ್ರವ್ಯಗಳಿಂದ ದೂರ ಇರಬೇಕು ಎಂದರು. ಶಿಕ್ಷಕ ಪರಶುರಾಮಪ್ಪ ನಾಗಣ್ಣನವರ ಮಾತನಾಡಿ, ವಿದ್ಯಾರ್ಥಿಗಳು ನಾಳಿನ ಉತ್ತಮ ಪ್ರಜೆಗಳಾಗಬೇಕಾದರೆ ಮಹತ್ತರ ಉದ್ದೇಶವನ್ನು ಹೊಂದಿರುವ ಬ್ಯಾಗ್‌ರಹಿತ ದಿನದ ಆಚರಣೆ ಅರ್ಥಪೂರ್ಣ ವಾಗುವಂತೆ ಮಾಡಬೇಕು. ಶಿಕ್ಷಕಿ ಶಾಂತಾಬಾಯಿ ಪಟ್ಟಣಶೆಟ್ಟಿ, ಸದಾಶಿವಯ್ಯ ಶಿರೂರು, ಸುಮಂಗಲಾ ಕುದುರಿ, ಲಕ್ಷ್ಮಿ ವಾಲಿಕಾರ್, ಆಲಮ್ಮ ಹೊಸೂರು ಇದ್ದರು.

KOPPAL Edition Edition
Jul 22, 2024 Page No. 01
Powered by: erelego.com











# ನಾವಿನ್ಯಯುತವಾಗಿ ತರಗತಿ ಪ್ರಕ್ರಿಯೆಯಲ್ಲಿ ಅಳವಡಿಸಿಕೊಂಡಿರುವ ಉಪಕ್ರಮಗಳು

* ಸ್ಮಾರ್ಟ್ ಕ್ಲಾಸ್ ಗಳು
* ಪ್ರಯೋಗಾಲಯಗಳು
* ಪ್ರತ್ಯೇಕ ಗ್ರಂಥಾಲಯ
* ಬಹುಮಾಧ್ಯಮಗಳು
* ಇ– ವಿದ್ಯಾಲೋಕ ಶಿಕ್ಷಣ
* ಶಾಲೆಯ ಶೈಕ್ಷಣಿಕ ಅಭಿವೃದ್ಧಿಗೆ ಕೊಡುಗೆಗಳು
* ಕಲಿಕಾ ಟಾಟಾ ಟ್ರಸ್ಟ್ ಮಾರ್ಗದರ್ಶನಗಳು
* ಗಣಿತದ ಮೂರ್ತ ರೂಪದ ಚಟುವಟಿಕೆಗಳು

ಸಂಗ್ರಹ

ಪರಶುರಾಮಪ್ಪ ನಾಗಣ್ಣನವರ

# ನಾವಿನ್ಯಯುತವಾಗಿ ತರಗತಿ ಪ್ರಕ್ರಿಯೆಯಲ್ಲಿ ಅಳವಡಿಸಿಕೊಂಡಿರುವಉಪಕ್ರಮಗಳು







ಮನವೆಂಬ ಆನೆಗೆ ಬುದ್ಧಿಯೇ ಅಂಕುಶ.
ಶಿಕ್ಷಣಕಿಂತ ಮಾನವನಿಗೆ ಶೀಲಚಾರಿತ್ರಗಳು ಹೆಚ್ಚು ಅವಶ್ಯಕ.




Food Chain



## ವಿಶೇಷ ಶೈಕ್ಷಣಿಕ ಚಟುವಟಿಕೆಗಳು ಮತ್ತು ಕಾರ್ಯಕ್ರಮಗಳು

* ಮಕ್ಕಳ ದಾಖಲಾತಿ ಆಂದೋಲನ ಕಾರ್ಯಕ್ರಮವನ್ನು ಮಾನ್ಯ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀ ಸುರೇಂದ್ರ ಕಾಂಬಳೆ, ಅವರು ಉದ್ಘಾಟನೆ ನೆರವೇರಿಸಿದರು.

* ಕಲಿಕಾ ಚಟುವಟಿಕೆಗಳ ಪೂರಕ ಪರಿಶೀಲನೆಗೆ ನಮ್ಮ ಶಾಲೆಗೆ ದೆಹಲಿಯಿಂದ ಮತ್ತು ಜಾರ್ಖಂಡ್, ಮುಂಬೈಯಿಂದ (ಕಲಿಕಾ ಟಾಟಾ ಟ್ರಸ್ಟ್) ತಂಡ ಭೇಟಿ ನೀಡಿ ವೀಕ್ಷಣೆ ಮಾಡಿ ಮೆಚ್ಚಿಗೆ ವ್ಯಕ್ತಪಡಿಸಿದರು.

* ಹೆಚ್ಚು ಮೊಬೈಲ್ ಬಳಕೆಯಿಂದ ಕಣ್ಣಿನ ಮೇಲೆ ದುಷ್ಪರಿಣಾಮಗಳ ಕುರಿತು ಜಾಗೃತಿ ಕಾರ್ಯಕ್ರಮ ಮತ್ತು ಮಕ್ಕಳಗೆ ತಪಾಸಣಾ ಕಾರ್ಯಕ್ರಮ

* ಶಾಲೆಯ ಆವರಣದಲ್ಲಿ ಮೈದಾನ ಸ್ವಚ್ಛತೆ ಆಂದೋಲನ ಕಾರ್ಯಕ್ರಮ ಮಾಡಲಾಯಿತು.

* ಮಕ್ಕಳಲ್ಲಿ ಸದೃಢವಾದ ಮನಸ್ಸಿಗೆ ಸದೃಢವಾದ ದೇಹವನ್ನು ಬೆಳೆಸಲು ಉತ್ತಮ ಆರೋಗ್ಯಕ್ಕಾಗಿ ಜಾಗೃತಿ ಕಾರ್ಯಕ್ರಮ ಮತ್ತು ಆಟೋಟ ಹಮ್ಮಿಕೊಳ್ಳಲಾಗಿದೆ.

* ಮಕ್ಕಳಲ್ಲಿ ಅಡಗಿರುವ ಮೌಢ್ಯತೆಯನ್ನು ಹೋಗಲಾಡಿಸಲು ವಿಜ್ಞಾನ ವಸ್ತು ಪ್ರದರ್ಶನ ಕಾರ್ಯಕ್ರಮ ನೆರವೇರಿಸಲಾಯಿತು.

* ಶಿಕ್ಷಣದ ಬಲವರ್ತನೆಗಾಗಿ ಕಲಿಕಾ ಟಾಟಾ ಟ್ರಸ್ಟ್ ಗ್ರಂಥಾಲಯ ಉದ್ಘಾಟನೆ ಮತ್ತು ಪುಸ್ತಕಗಳನ್ನು ಓದುವುದು ನಿರಂತರ.

* ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಜಾಣರ ಗುರು ಪತ್ರಿಕೆಯನ್ನು ಪ್ರತಿದಿನ ಮಕ್ಕಳಿಗೆ ಹಂಚುವುದು ಮಕ್ಕಳು ಓದುವಂತೆ ನೋಡಿಕೊಳ್ಳುವುದು.

* ನಾವು ಮನುಜರು ವಿಶೇಷ ಕಾರ್ಯಕ್ರಮದಲ್ಲಿ ಬೇರೆ– ಬೇರೆ ಸಂಪನ್ಮೂಲ ಮೂಲ ವ್ಯಕ್ತಿಗಳಿಂದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದು.

# ವಿಶೇಷ ಶೈಕ್ಷಣಿಕ ಚಟುವಟಿಕೆಗಳು ಮತ್ತು ಕಾರ್ಯಕ್ರಮಗಳು
























ಮಕ್ಕಳ ಗಣತಿ ಸಮೀಕ್ಷೆ- 2023
ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮಿಯಾಪುರ

# ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾದ ಸುದ್ದಿಗಳು

## ಮಿಯಾಪುರ ಶಾಲೆಯಲ್ಲಿ ಹಮ್ಮಿಕೊಂಡ ವಿವಿಧ ಕಾರ್ಯಕ್ರಮಗಳ ಕುರಿತು ವಿವಿಧ ಪತ್ರಿಕೆಗಳಲ್ಲಿ ಪ್ರಕಟವಾದ ಸುದ್ದಿಗಳು

ಕನ್ನಡಪ್ರಭ

**ಆಂದೋಲನ...** ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾಲಾ ಮಕ್ಕಳ ದಾಖಲಾತಿ ಹಾಗೂ ಹಾಜರಾತಿ ಆಂದೋಲನ ಕಾರ್ಯಕ್ರಮ

### ಮಕ್ಕಳನ್ನು ಸರ್ಕಾರಿ ಶಾಲೆಗೆ ಸೇರಿಸಿ: ಬಿಇಒ ಸುರೇಂದ್ರ ಕಾಂಬಳೆ

• **ಕನ್ನಡಪ್ರಭ ವಾರ್ತೆ** ಕುಷ್ಟಗಿ

ಅರ್ಹ ವಯಸ್ಸಿನ ಎಲ್ಲ ಮಕ್ಕಳು ಸರ್ಕಾರಿ ಶಾಲೆಗೆ ದಾಖಲಾಗಬೇಕು. ಮಕ್ಕಳಿಗೆ ಗುಣಾತ್ಮಕ ಶಿಕ್ಷಣ ನೀಡುವಲ್ಲಿ ಪಾಲಕರ ಮತ್ತು ಶಿಕ್ಷಣ ಇಲಾಖೆಯ ಪಾತ್ರ ಮಹತ್ವದ್ದಾಗಿದೆ ಎಂದು ಬಿಇಒ ಸುರೇಂದ್ರ ಕಾಂಬಳೆ ಹೇಳಿದರು.

ತಾಲೂಕಿನ ಮಿಯ್ಯಾಪುರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾಲಾ ಮಕ್ಕಳ ದಾಖಲಾತಿ ಹಾಗೂ ಹಾಜರಾತಿ ಆಂದೋಲನ ಕಾರ್ಯಕ್ರಮವನ್ನು ಮಕ್ಕಳಿಗೆ ಪುಷ್ಪ ಹಾಗೂ ನೋಟ್ ಬುಕ್, ಪೆನ್ ಕೊಡುವುದರ ಮೂಲಕ ಉದ್ಘಾಟಿಸಿ ಮಾತನಾಡಿದರು.

ಕಲಿಕಾ ಟಾಟಾ ಟ್ರಸ್ಟ್ ವ್ಯವಸ್ಥಾಪಕ ಶಿವಕುಮಾರ ಯಾದವ ಮಾತನಾಡಿ, ಒಂದು ಪ್ರಗತಿಶೀಲ ಸಮಾಜ ನಿರ್ಮಾಣದ ಪ್ರಕ್ರಿಯೆಗೆ ಶಿಕ್ಷಣ ಮೂಲಭೂತ ಸಾಧನ. 3ರಿಂದ 6 ವರ್ಷದೊಳಗಿನ ಮಕ್ಕಳಿಗೆ ಅಂಗನವಾಡಿ ಶಿಕ್ಷಣ - 6ರಿಂದ 14 ವರ್ಷದೊಳಗಿನ ಎಲ್ಲ ಮಕ್ಕಳು ಶಿಕ್ಷಣ ಪಡೆದು ಉತ್ತಮ ಪ್ರಜೆಗಳಾಗಬೇಕು ಎಂದು ಹೇಳಿದರು.

ಸಿಆರ್‌ಪಿ ಅಯ್ಯಪ್ಪ ಸುರಳ ಮಾತನಾಡಿ, ಮಕ್ಕಳ ಕಲಿಕೆಯಲ್ಲಿ ಪಾಲಕ, ಪೋಷಕರ ಜವಾಬ್ದಾರಿ ಅತಿ ಮುಖ್ಯವಾಗಿದೆ. ಈ ದಿಶೆಯಲ್ಲಿ ನಾವು ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಿ ಭವ್ಯ ಭಾರತದ ಭವಿಷ್ಯಕ್ಕಾಗಿ ಉತ್ತಮ ಪ್ರಜೆಗಳನ್ನು ರೂಪಿಸಬೇಕಿದೆ ಎಂದರು.

ಈ ಸಂದರ್ಭದಲ್ಲಿ ಅಡವಿಭಾವಿ ಗ್ರಾಪಂ ಅಭಿವೃದ್ಧಿ ಅಧಿಕಾರಿ ಶಿವಪುತ್ರಪ್ಪ ಬರಿದೇಲಿ ಮತ್ತು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಅಧಿಕಾರಿಶೋಭಾಮಾತನಾಡಿದರು. ಇದಕ್ಕೂ ಮುನ್ನ ಮಕ್ಕಳ ದಾಖಲಾತಿ ಮತ್ತು ಹಾಜರಾತಿ ಆಂದೋಲನದ ಜಾಥಾಕ್ಕೆ ಗ್ರಾಪಂ ಅಧ್ಯಕ್ಷ ಶರಣಪ್ಪ ಮದ್ದೂರು ಮತ್ತು ಎಸ್‌ಡಿಎಂಸಿ ಅಧ್ಯಕ್ಷ ನಾಗಪ್ಪ ಚಾಲನೆ ನೀಡಿದರು.

ಡೊಳ್ಳು ಕುಣಿತ, ಮಕ್ಕಳಿಂದ ನೃತ್ಯ ಕಾರ್ಯಕ್ರಮದ ಜೊತೆಗೆ ಪಾಲಕರಿಗೆ ಶಿಕ್ಷಣದ ಕುರಿತು ಅರಿವು ಮೂಡಿಸಲಾಯಿತು. ಗ್ರಾಪಂ ಸದಸ್ಯರಾದ ಗವಿಸಿದ್ದಪ್ಪ ಕುದುರಿ, ಶರಣೆಗೌಡ ಮ್ಯಾಗೇರಿ, ಮುಖ್ಯ ಶಿಕ್ಷಕ ಖಾಜಾಹುಸೇನ ಒಂಟೆಳಿ, ಕಲಿಕಾ ಟಾಟಾ ಟ್ರಸ್ಟ್‌ನ ರಾಜಕುಮಾರ್‌ಕುಂಬಾರ್, ಬಸವರಾಜ ಹಾದಿಮನಿ, ಗೋವಿಂದಗೌಡ ವಾಸನದ, ವಿರೂಪಾಕ್ಷಪ್ಪ ಬನಹಟ್ಟಿ, ಯಲ್ಲಪ್ಪ ಗೋದಿ, ಗವಿಸಿದ್ದಪ್ಪ ಬೇವೂರು, ಶಿಕ್ಷಕರಾದ ನಾಗನಗೌಡ ಪೊಲೀಸ್ ಪಾಟೀಲ್, ಶಾಂತಬಾಯಿ ಪಟ್ಟಣಶೆಟ್ಟಿ, ಸದಾಶಿವಯ್ಯ ಶಿರೂರ, ಪರಶುರಾಮಪ್ಪ ನಾಗಣ್ಣವರ, ಸುಮಂಗಲಾ ಕುದುರಿ, ಆಲಮ್ಮ ಹೊಸೂರು, ಅಂಗನವಾಡಿ ಕಾರ್ಯಕರ್ತರಾದ ನಾಗರತ್ನಾ ವಾಲಿಕಾರ, ಜ್ಯೋತಿಲಕ್ಷ್ಮಿ ಬನಹಟ್ಟಿ, ಪಾಲಕರು ಮತ್ತು ಮಕ್ಕಳು ಇದ್ದರು.



ಶಾಲಾ ಮಕ್ಕಳ ದಾಖಲಾತಿ ಹಾಗೂ ಹಾಜರಾತಿ ಆಂದೋಲನ ಕಾರ್ಯಕ್ರಮದಲ್ಲಿ ಮಕ್ಕಳಿಗೆ ಪುಷ್ಪ ಹಾಗೂ ನೋಟ್ ಬುಕ್, ಪೆನ್ ವಿತರಿಸಲಾಯಿತು.

KOPPAL Edition
Jun 12, 2024 Page No. 01
Powered by: erelego.com

VK ವಿಜಯ ಕರ್ನಾಟಕ e-paper

### ಮಿಯಾಪುರ ಶಾಲೆಗೆ ಅಭಿನಂದನಾ ಪತ್ರ

■ **ವಿಕ ಸುದ್ದಿಲೋಕ** ಹನುಮಸಾಗರ

ಸಮೀಪದ ಮಿಯಾಪುರ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಗಣಿತ ಆಂದೋಲನದಲ್ಲಿ ಉತ್ತಮ ಸಾಧನೆ ಮಾಡಿದಕ್ಕಾಗಿ ಪ್ರಶಸ್ತಿ ನೀಡಿ ಗೌರವಿಸಲಾಗಿದೆ.

ಕೊಪ್ಪಳದ ಜಿಪಂ.ಯಲ್ಲಿ ಇತ್ತೀಚೆಗೆ ನಡೆದ ಜಿಲ್ಲಾಮಟ್ಟದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗಳ ಗಣಿತ ವಿಚಾರ ಸಂಕೀರ್ಣದ ಶೈಕ್ಷಣಿಕ ವರ್ಷದಲ್ಲಿ ಗಣಿತದಲ್ಲಿ ಉತ್ತಮ ಸಾಧನೆ ಮಾಡಿರುವ ಶಾಲೆಗಳ ಮುಖ್ಯಶಿಕ್ಷಕರಿಗೆ ಹಾಗೂ ಎಸ್ಡಿಎಂಸಿ ಅಧ್ಯಕ್ಷರಿಗೆ ಆಹ್ವಾನಿಸಿ ಅಭಿನಂದನಾ ಪತ್ರ ವಿತರಿಸಲಾಯಿತು. ಇದರಲ್ಲಿ ಮಿಯಾಪುರ ಶಾಲೆಯ ಮುಖ್ಯಶಿಕ್ಷಕ ಖಾಜಾಹುಸೇನ್ ವಂಟೆಳಿ ಅವರಿಗೆ ಜಿಪಂ. ಸಿಇಒ ರಾಹುಲ್ ರತ್ನಂ ಪಾಂಡೆಯ ಅಭಿನಂದನೆ ಪತ್ರ ಸಲ್ಲಿಸಿದರು. ಜಿಲ್ಲಾಧಿಕಾರಿ ನಲಿನ್ ಅತುಲ್ ಹಾಗೂ ಶಿಕ್ಷಣ ಇಲಾಖೆ ಅಧಿಕಾರಿಗಳು, ಅಕ್ಷರ ಫೌಂಡೇಶನ್ ಅಧಿಕಾರಿಗಳು ಭಾಗಿಯಾಗಿದ್ದರು.



ಹನುಮಸಾಗರ ಸಮೀಪದ ಮಿಯಾಪುರ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಗಣಿತ ವಿಷಯದಲ್ಲಿ ಉತ್ತಮ ಸಾಧನೆ ಮಾಡಿದಕ್ಕೆ ಅಭಿನಂದನಾ ಪತ್ರ ನೀಡಿ ಗೌರವಿಸಲಾಯಿತು.

ಕನ್ನಡಪ್ರಭ

## ಸುದ್ದಿ ಸಿಂಚನ

# ಮಿಯಾಪುರ ಶಾಲೆ ಸಾಧನೆ

**ಹನುಮಸಾಗರ:** ಸಮೀಪದ ಮಿಯಾಪೂರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಗಣಿತ ಆಂದೋಲನದಲ್ಲಿ ಉತ್ತಮ ಸಾಧನೆ ಮಾಡಿದ್ದಕ್ಕಾಗಿ ಅಭಿನಂದನಾ ಪತ್ರ, ನೀಡಿ ಗೌರವಿಸಲಾಗಿದೆ. ಕೊಪ್ಪಳದ ಜಿಪಂದಲ್ಲಿ ಇತ್ತೀಚೆಗೆ ನಡೆದ ಜಿಲ್ಲಾ ಮಟ್ಟದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳ ಗಣಿತ ವಿಚಾರ ಸಂಕೀರ್ಣದಲ್ಲಿ ಗಣಿತದಲ್ಲಿ ಉತ್ತಮ ಸಾಧನೆ ಮಾಡಿರುವ ಶಾಲೆಗಳ ಮುಖ್ಯ ಶಿಕ್ಷಕರಿಗೆ ಹಾಗೂ ಎಸ್‌ಡಿಎಂಸಿ ಅಧ್ಯಕ್ಷರಿಗೆ ಅಭಿನಂದನಾ ಪತ್ರ ವಿತರಿಸಲಾ ಯಿತು. ಈ ವೇಳೆ ಮಿಯಾಪುರ ಶಾಲೆಯ ಮುಖ್ಯಶಿಕ್ಷಕ ಖಾಜಾಹುಸೇನ ವಂಟೆಳಿ ಅವರಿಗೆ ಜಿಪಂ ಸಿಇಒ ರಾಹುಲ್ ರತ್ನಂ ಪಾಂಡೆ ಅಭಿನಂದನೆ ಪತ್ರ ವಿತರಣೆ ಮಾಡಿದರು.

# ಮಕ್ಕಳಲ್ಲಿ ಮೊಬೈಲ್ ಬಳಕೆಯ ದುಷ್ಪರಿಣಾಮ ಕಣ್ಣಿನ ತಪಾಸಣೆ ಹಾಗೂ ಜಾಗೃತಿ ಕಾರ್ಯಕ್ರಮ




**ಕುಷ್ಟಗಿ,ನ.2–** ತಾಲ್ಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮಿಯಾಪುರ, ಗ್ರಾಮದಲ್ಲಿ ವಿದ್ಯಾರ್ಥಿಗಳು ಮೊಬೈಲ್ ನೋಡುವುದರಿಂದ ಆಗುವ ದುಷ್ಪರಿಣಾಮಗಳ ಕುರಿತು ಜಾಗೃತಿ ಹಾಗೂ ಕಣ್ಣುಗಳ ತಪಾಸಣೆ ಶಿಬಿರ ಏರ್ಪಡಿಸಲಾಯಿತು.

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಜಗದೀಶಪ್ಪ ಎಂ ಸಮನ್ವಯ ಅಧಿಕಾರಿಗಳು ಇವರು ಮಾತನಾಡಿ– ಮಕ್ಕಳೇ, ಗ್ರಾಮದವರ ಸಹಕಾರದೊಂದಿಗೆ ಈಗ ಎಲ್ಲಾ ಸೌಲಭ್ಯಗಳು ಶಾಲೆಗಳಲ್ಲಿ ಇವೆ, ಸ್ಮಾರ್ಟ್ ಕ್ಲಾಸ್ ಮೂಲಕ ಬೋಧನೆಗಳು ಕೂಡ ನಡೆಯುತ್ತವೆ ಆದ್ದರಿಂದ ಹೆಚ್ಚಾಗಿ ಮೊಬೈಲ್ ಫೋನ್ ಬಳಕೆ ಮಾಡಬೇಡಿ ಮೊಬೈಲ್ ನೋಡುವುದರಿಂದ ಕುರುಡುತನ ಬರುವ ಸಾಧ್ಯತೆ ಹೆಚ್ಚು ಕಣ್ಣೇ ಕಾಣದಿದ್ದರೆ ಜಗತ್ತು ನೋಡಲು ಸಾಧ್ಯವಿಲ್ಲ, ಮೊಬೈಲ್ ನೋಡುವುದನ್ನು ಬಿಟ್ಟು ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಿ ಹಾಗೂ ಹೆಚ್ಚಾಗಿ ಆಟಗಳಲ್ಲಿ ಭಾಗವಹಿಸಿ ಮನೋರಂಜನೆ ಜೊತೆಗೆ ಆರೋಗ್ಯವನ್ನು ಕಾಪಾಡಿಕೊಳ್ಳಿರಿ ಈ ಜಾಗೃತಿ ಕಾರ್ಯಕ್ರಮ ಹಾಗೂ ಕಣ್ಣಿನ ತಪಾಸಣೆ ಶಿಬಿರ ಏರ್ಪಡಿಸಿದ್ದು ಶ್ಲಾಘನೀಯ ಎಂದು ಹೇಳಿದರು.

ಪ್ರಾಸ್ತಾವಿಕ ಮಾತನಾಡಿದ ಮುಖ್ಯ ಶಿಕ್ಷಕ ಖಾಜಾಹುಸೇನ ಒಂಟೆಳಿ ಮಾತನಾಡಿ – ಮಕ್ಕಳು ಬೇರೆ ಬೇರೆ ಉದ್ದೇಶಗಳಿಗಾಗಿ ಮೊಬೈಲ್ ಬಳಸುತ್ತಾರೆ ಹೆಚ್ಚು ಹೊತ್ತು ಮೊಬೈಲ್ ನೋಡುವುದರಿಂದ ಇದು ಖಂಡಿತವಾಗಿಯೂ ಅವರ ಕಣ್ಣಿನ ಮತ್ತು ಮೆದುಳಿನ ಮೇಲೆ ಪರಿಣಾಮ ಬೀರುತ್ತದೆ ಮಕ್ಕಳು ಮಾನಸಿಕ ಹಾಗು ದೈಹಿಕ ಬೆಳವಣಿಗೆ ಕೂಡ ದುಷ್ಪರಿಣಾಮ ಬೀರುತ್ತದೆ ಹೀಗಾಗಿ ಮೊಬೈಲ್ ಹೆಚ್ಚು ಹೊತ್ತು ಬಳಸದೆ ಇರುವುದು ಉತ್ತಮ ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಪ್ರಕಾಶ ತಾರಿವಾಳ ಉಪ ಪ್ರಾಂಶುಪಾಲರು, ಶ್ರೀ ವಿಜಯ ಮಹಾಂತೇಶ್ ಆಯುರ್ವೇದಿಕ್ ಮಹಾವಿದ್ಯಾಲಯ ಇಳಕಲ್ಲ ಇವರು ಮಾತನಾಡಿ–ಈ ಒಂದು ಕಾರ್ಯಕ್ರಮ ಮಕ್ಕಳಲ್ಲಿ ಜಾಗೃತಿ ಮೂಡಿಸುವುದರ ಜೊತೆಗೆ ಪಾಲಕರಿಗೂ ಇದರ ಜಾಗೃತಿ ಬಹಳಷ್ಟು ಅಗತ್ಯವಾಗಿದೆ ಮಕ್ಕಳು ಹೆಚ್ಚು ಹೊತ್ತು ಮೊಬೈಲ್‌ನ್ನ ಬಳಸದೇ ಇರುವುದು ಉತ್ತಮ. ಇಂತಹ ಶಿಬಿರಗಳು ಹೆಚ್ಚು ಹೆಚ್ಚು ನಡೆಯಬೇಕು. ಕಣ್ಣಿಗೂ ಹಾಗೂ ದೇಹಕ್ಕೂ ಇದು ಬಹಳಷ್ಟು ರೋಗಗಳನ್ನುಂಟು ಮಾಡುತ್ತದೆ ಎಂದರು. ಡಾಕ್ಟರ್ ವಿನೋದ್ ಜೆ ಬಿ ಉಪನ್ಯಾಸಕರು, ಡಾಕ್ಟರ್ ಪ್ರಶಾಂತ್ ಕಲ್ಲನ್ ಶೆಟ್ಟಿ ಉಪನ್ಯಾಸಕರು, ಡಾ. ಜೀವನಸಾಬ ಬಿನ್ನಾಳ, ಬಿ ಆರ್ ಸಿ ಸಂಪನ್ಮೂಲ ವ್ಯಕ್ತಿಗಳು, ಡಾಕ್ಟರ್ ಶ್ವೇತಾ ಸಾವಳಗಿ ಡಾ. ಸುಷ್ಮಾ ಕುಂಬಾರ್, ಅಬುಬೂಕರ ಮುಲ್ಲಾ ಇವರು ಜಾಗೃತಿ ಕುರಿತು ಮಾತನಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಸ್ಡಿಎಂಸಿ ಅಧ್ಯಕ್ಷ ನಾಗಪ್ಪ ಇವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಶರಣವ್ವ ಶರಣಗೌಡ ಮ್ಯಾಗೇರಿ ಉಪಾಧ್ಯಕ್ಷರು ಗ್ರಾಮ ಪಂಚಾಯತ್, ಗವಿಸಿದ್ದಪ್ಪ ಕುದುರಿ ಗ್ರಾಮ ಪಂಚಾಯತ್ ಸದಸ್ಯರು, ಶಿಕ್ಷಕರಾದ ಸದಾಶಿವಯ್ಯ ಹಿರೇಮಠ ನಾಗನಗೌಡ ಪೋಲಿಸ್ ಪಾಟೀಲ್, ಶಾಂತಾಬಾಯಿ ಪಟ್ಟಣಶೆಟ್ಟಿ, ಅಕ್ಕಮಹಾದೇವಿ ಹಿರೇಮಠ, ಜಯಶ್ರೀ ಮದ್ನೂರ, ಲಕ್ಷ್ಮೀ ವಾಲಿಕಾರ, ಶಬಾನಾಬೇಗಂ ಹೊಸಪೇಟೆ, ಸುಮಂಗಲಾ ಕುದುರಿ ಮತ್ತು ಪಾಲಕರು, ಹಿರಿಯರು ಉಪಸ್ಥಿತರಿದ್ದರು. ಸದಾಶಿವಯ್ಯ ಹಿರೇಮಠ ಸ್ವಾಗತಿಸಿದರು.

ನಾಗನಗೌಡ ಪೋಲಿಸ್ ಪಾಟೀಲ್ ಕಾರ್ಯಕ್ರಮ ನಿರೂಪಿಸಿದರು, ಶಾಂತಾಬಾಯಿ ಪಟ್ಟಣಶೆಟ್ಟಿ ವಂದಿಸಿದರು.

# ಆರೋಗ್ಯದಿಂದಿರಲು ಸ್ವಚ್ಛತೆಗೆ ಆದ್ಯತೆ ನೀಡಿ

ಹನುಮಸಾಗರ: ವಿದ್ಯಾರ್ಥಿಗಳು ವೈಯಕ್ತಿಕ ಸ್ವಚ್ಛತೆ ಕಾಪಾಡಿಕೊಂಡು ಆರೋಗ್ಯವಾಗಿದ್ದರೆ ಓದಿನ ಕಡೆಗೆ ಗಮನಹರಿಸಲು ಸಾಧ್ಯವಾಗುತ್ತದೆ ಎಂದು ವೈದ್ಯಾಧಿಕಾರಿ ಆರ್.ಬಿ. ಹವಳದ ಹೇಳಿದರು.

ಸಮೀಪದ ಮಿಯ್ಯಾಪೂರ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ರಾಷ್ಟ್ರೀಯ ಬಾಲ ಸ್ವಾಸ್ಥ್ಯ ಕಾರ್ಯಕ್ರಮದಡಿ ಶನಿವಾರ ಹಮ್ಮಿಕೊಂಡಿದ್ದ ಶಾಲಾ ಮಕ್ಕಳ ಆರೋಗ್ಯ ತಪಾಸಣೆ ಕಾರ್ಯಕ್ರಮದಲ್ಲಿ ಮಾತನಾಡಿದರು. ಮಕ್ಕಳಲ್ಲಿ ಕಂಡುಬರುವಂತಹ ಕಿವಿ ಸೋರುವುದು, ಮೂಗಿನಲ್ಲಿ ರಕ್ತ ಬರುವುದು, ಗಂಟಲು ನೋವು, ಕಣ್ಣಿನ ಸಮಸ್ಯೆ, ಚರ್ಮ ಹಾಗೂ ಹೃದಯ ತೊಂದರೆ ಗುರುತಿಸಿ ಚಿಕಿತ್ಸೆ ನೀಡಲಾಗುವುದು. ಹೆಚ್ಚಿನ ಚಿಕಿತ್ಸೆ ಅವಶ್ಯಕತೆ ಇರುವ ಮಕ್ಕಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರ, ತಾಲೂಕು ಹಾಗೂ ಜಿಲ್ಲಾ ಆಸ್ಪತ್ರೆಗೆ ಶಿಫಾರಸು ಮಾಡಲಾಗುವುದು. ಪ್ರತಿಯೊಬ್ಬರೂ ಆರೋಗ್ಯವಾಗಿರಲು ಸ್ವಚ್ಛತೆಗೆ ಆದ್ಯತೆ ನೀಡಬೇಕು ಎಂದರು. ಶಿಕ್ಷಕರಾದ ಸದಾಶಿವಯ್ಯ ಹಿರೇಮಠ, ನಾಗನಗೌಡ ಪೊಲೀಸ್ ಪಾಟೀಲ್, ಶಾಂತಾಬಾಯಿ ಪಟ್ಟಣಶೆಟ್ಟಿ, ಪರಶುರಾಮ ನಾಗಣ್ಣನವರ, ಅಕ್ಕಮಹಾದೇವಿ ಹಿರೇಮಠ, ಜಯಶ್ರೀ ಮದ್ಲೂರ, ಲಕ್ಷ್ಮೀ ವಾಲಿಕಾರ ಇತರರಿದ್ದರು.

ವಿಜಯವಾಣಿ ಚಿತ್ರ



ಮಿಯ್ಯಾಪೂರ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಶನಿವಾರ ವಿದ್ಯಾರ್ಥಿಗಳ ಆರೋಗ್ಯ ತಪಾಸಣೆ ನಡೆಸಲಾಯಿತು. ಡಾ.ಆರ್.ಬಿ. ಹವಳದ, ಡಾ. ವಿಜಯಲಕ್ಷ್ಮೀ ಬಾರಡ್ಡಿ, ಔಷಧ ವಿತರಕಿ ವಿಶಾಲಾಕ್ಷಿ, ಮುಖ್ಯಶಿಕ್ಷಕ ಖಾಜಾಹುಸೇನ ಒಂಟೆಳಿ ಇದ್ದರು.

# ವಿಜ್ಞಾನದಿಂದ ಬದುಕು ಹಸನು

■ ವಿಜಯವಾಣಿ ಸುದ್ದಿಜಾಲ ಹನುಮಸಾಗರ

ಜನ ಸಾಮಾನ್ಯರಲ್ಲಿರುವ ಮೂಢನಂಬಿಕೆಗಳನ್ನು ದೂರ ಮಾಡಿ ವೈಜ್ಞಾನಿಕ ಮನೋಭಾವ ಬೆಳೆಸುವುದು ವಿಜ್ಞಾನದ ಪ್ರಮುಖ ಉದ್ದೇಶವಾಗಿದೆ ಎಂದು ರಾಜ್ಯ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತ ಬಸವರಾಜ ವಾಲಿಕಾರ ಹೇಳಿದರು.

ಸಮೀಪದ ಮಿಯ್ಯಾಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಗುರುವಾರ ಹಮ್ಮಿಕೊಂಡಿದ್ದ ವಿಜ್ಞಾನ ವಸ್ತು ಪ್ರದರ್ಶನದಲ್ಲಿ ಮಕ್ಕಳು ಪ್ರದರ್ಶಿಸಿದ ವಿಜ್ಞಾನ ಚಿತ್ರಗಳನ್ನು ವೀಕ್ಷಿಸಿ ಮಾತನಾಡಿದರು. ಮಕ್ಕಳು ಎಲ್ಲವನ್ನು ಕ್ರಿಯಾಶೀಲವಾಗಿ ತಗೆದುಕೊಳ್ಳಬೇಕು. ಪ್ರಯೋಗಗಳನ್ನು ಮಾಡುವ ಮೂಲಕ ಸಮಸ್ಯೆಗಳನ್ನು ಬಗೆಹರಿಸಿಕೊಂಡು ಹೊಸ ಹೊಸ ಆವಿಷ್ಕಾರಗಳನ್ನು ಕಂಡುಕೊಳ್ಳಬೇಕು. ನಿಮ್ಮಲ್ಲಿರುವ ಪ್ರತಿಭೆ ಪ್ರದರ್ಶಿಸಲು ವಸ್ತು ಪ್ರದರ್ಶನ ಉತ್ತಮ ವೇದಿಕೆಯಾಗಿದ್ದು, ಸದುಪಯೋಗ ಪಡೆದುಕೊಳ್ಳಬೇಕು. ವೈಜ್ಞಾನಿಕವಾಗಿ ಪ್ರಗತಿ ಹೊಂದಿದರೆ ಮಾತ್ರ ದೇಶ ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ. ಸಾಮಾನ್ಯ ಜನರ ಬದುಕನ್ನು ವಿಜ್ಞಾನ ಹಸನುಗೊಳಿಸುತ್ತದೆ ಎಂದರು.

ಗ್ರಾಪಂ ಅಧ್ಯಕ್ಷ ಶರಣಪ್ಪ ಮದ್ಲೂರ ಕಾರ್ಯಕ್ರಮ ಉದ್ಘಾಟಿಸಿದರು. ಎಸ್ಡಿಎಂಸಿ ಅಧ್ಯಕ್ಷ ಎಂ. ನಾಗಪ್ಪ, ಮುಖ್ಯಶಿಕ್ಷಕ ಖಾಜಾಹುಸೇನ ಒಂಟೆಳಿ, ಗ್ರಾಪಂ ಸದಸ್ಯರಾದ ಗವಿಸಿದ್ದಪ್ಪ ಕುದುರಿ, ಶರಣಗೌಡ ಮ್ಯಾಗೇರಿ, ದುರಗೇಶ ಎಂ., ಶಿಕ್ಷಕರಾದ ಪರಶುರಾಮ ನಾಗಣ್ಣವರ, ಸದಾಶಿವಯ್ಯ ಶಿರೂರ್, ನಾಗನಗೌಡ ಪೊಲೀಸ್ ಪಾಟೀಲ್, ಶಾಂತಾಬಾಯಿ ಪಟ್ಟಣಶೆಟ್ಟಿ, ಜಯಶ್ರೀ ಮದ್ಲೂರ, ಲಕ್ಷ್ಮೀ ವಾಲಿಕಾರ, ಸುಮಂಗಲಾ ಕುದುರಿ, ಮುಖಂಡರಾದ ರಾಜಕುಮಾರ, ನಾಗರಾಜ್ ಪೊಲೀಸ್ ಪಾಟೀಲ, ನಿಂಗನಗೌಡ ಹೊಸೂರು, ಶರಣಪ್ಪ ರಾಮವಾಡಗಿ, ಗೋವಿಂದಪ್ಪ ಎಂ, ಭೀಮಣ್ಣ ಹೊಸಮನಿ, ಕನಕರಾಯ ಉಪ್ಪೇರಿ, ಪರಶುರಾಮ ಪೂಜಾರಿ ಇತರರಿದ್ದರು.

ವಿಜಯವಾಣಿ ಚಿತ್ರಗಳು




ಹನುಮಸಾಗರ ಸಮೀಪದ ಮಿಯ್ಯಾಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಗುರುವಾರ ಏರ್ಪಡಿಸಿದ್ದ ವಿಜ್ಞಾನ ವಸ್ತು ಪ್ರದರ್ಶನವನ್ನು ರಾಜ್ಯ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತ ಬಸವರಾಜ ವಾಲಿಕಾರ ವೀಕ್ಷಿಸಿದರು. ಗ್ರಾಪಂ ಅಧ್ಯಕ್ಷ ಶರಣಪ್ಪ ಮದ್ಲೂರ, ಎಸ್ಡಿಎಂಸಿ ಅಧ್ಯಕ್ಷ ನಾಗಪ್ಪ ಎಂ., ಮುಖ್ಯಶಿಕ್ಷಕ ಖಾಜಾಹುಸೇನ ಒಂಟೆಳಿ, ಗ್ರಾಪಂ ಸದಸ್ಯರಾದ ಗವಿಸಿದ್ದಪ್ಪ ಕುದುರಿ, ಶರಣಗೌಡ ಮ್ಯಾಗೇರಿ, ದುರಗೇಶ ಎಂ. ಇತರರಿದ್ದರು.

MAGZTER
MAGZTER
@mutturaj
Clipped from - Vijayavani Gangavathi - March 01, 2024
Read it digitally on the Magzter app



ಹನುಮಸಾಗರ ಸಮೀಪದ ಮಿಯಾಪುರ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನ ಆಚರಿಸಲಾಯಿತು.

# ಗಮನ ಸೆಳೆದ ವಿಜ್ಞಾನ ವಸ್ತು ಪ್ರದರ್ಶನ

■ **ವಿಕ ಸುದ್ದಿಲೋಕ** ಹನುಮಸಾಗರ

ಸಮೀಪ ಮಿಯಾಪುರ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನದ ನಿಮಿತ್ತ ವಿಜ್ಞಾನ ವಸ್ತು ಪ್ರದರ್ಶನ ನಡೆಯಿತು.

ರಾಜ್ಯ ಪ್ರಶಸ್ತಿ ಪುರಸ್ಕೃತ ಬಸವರಾಜ ವಾಲಿಕಾರ ಅವರು ವಸ್ತು ಪ್ರದರ್ಶನಕ್ಕೆ ಚಾಲನೆ ನೀಡಿ ಮಾತನಾಡಿ, ವಿಜ್ಞಾನವು ಜನಸಾಮಾನ್ಯರಿಗೂ ತಲುಪಬೇಕಿದೆ ಎಂದರು. ಎಸ್ಡಿಎಂಸಿ ಅಧ್ಯಕ್ಷ ಎಂ.ನಾಗಪ್ಪ, ಗ್ರಾಪಂ ಅಧ್ಯಕ್ಷ ಶರಣಪ್ಪ ಮದ್ಲೂರು, ಮುಖ್ಯಶಿಕ್ಷಕ ಖಾಜಾಹುಸೇನ್ ವಂಟೆಳಿ, ವಿಜ್ಞಾನ ಶಿಕ್ಷಕ ಪರಶುರಾಮ ನಾಗಣ್ಣವರ, ಗ್ರಾಪಂ ಸದಸ್ಯರಾದ ಗವಿಸಿದ್ದಪ್ಪ ಕುದುರಿ, ಶರಣಗೌಡ ಮ್ಯಾಗೇರಿ, ಎಂ.ದುರ್ಗೇಶ, ಟಾಟಾ ಟ್ರಸ್ಟ್‌ನ ನೋಡಲ್ ಅಧಿಕಾರಿಗಳಾದ ರಾಜಕುಮಾರ, ನಾಗರಾಜ ಪೊಲೀಸ್ ಪಾಟೀಲ್, ನಿಂಗನಗೌಡ ಹೊಸೂರ, ಶರಣಪ್ಪ ರಾಮವಾಡಗಿ, ಎಂ.ಗೋವಿಂದಪ್ಪ, ಭೀಮಣ್ಣ ಹೊಸಮನಿ, ಕನಕರಾಯ ಉಪ್ಪೇರಿ, ಪರಶುರಾಮ ಪೂಜಾರಿ, ಶಿಕ್ಷಕರಾದ ಸದಾಶಿವಯ್ಯ ಶಿರೂರ, ನಾಗನಗೌಡ ಪೊಲೀಸ್ ಪಾಟೀಲ್, ಶಾಂತಾಬಾಯಿ ಪಟ್ಟಣಶೆಟ್ಟಿ, ಪರಶುರಾಮ ನಾಗಣ್ಣವರ, ಜಯಶ್ರೀ ಮದ್ಲೂರ, ಲಕ್ಷ್ಮಿ ವಾಲಿಕಾರ, ಸುಮಂಗಲಾ ಕುದುರಿ ಇದ್ದರು.

ಕನ್ನಡಪ್ರಭ

**ವಸ್ತು ಪ್ರದರ್ಶನ** | ಮಕ್ಕಳ ಪ್ರತಿಭೆ ಅನಾವರಣಕ್ಕೆ ಉತ್ತಮ ವೇದಿಕೆ: ಗ್ರಾಪಂ ಅಧ್ಯಕ್ಷ ಶರಣಪ್ಪ ಮದ್ಲೂರ

# ಗಮನ ಸೆಳೆದ ರಾಷ್ಟ್ರೀಯ ವಿಜ್ಞಾನ ವಸ್ತು ಪ್ರದರ್ಶನ

• **ಕನ್ನಡಪ್ರಭ ವಾರ್ತೆ** ಹನುಮಸಾಗರ

ಮಕ್ಕಳಿಗೆ ವಿಜ್ಞಾನ ಶಿಕ್ಷಣದ ಬಗ್ಗೆ ಅಭಿರುಚಿ ಬೆಳೆಸುವ ಅವಶ್ಯಕತೆ ಇದೆ. ಮಕ್ಕಳ ಪ್ರತಿಭೆ ಅನಾವರಣಕ್ಕೆ ಉತ್ತಮ ವೇದಿಕೆಯಾಗಿದೆ ಎಂದು ಗ್ರಾಪಂ ಅಧ್ಯಕ್ಷ ಶರಣಪ್ಪ ಮದ್ಲೂರ ಹೇಳಿದರು.

ಸಮೀಪದ ಸರ್ಕಾರಿ ಹಿರಿಯ ಪ್ರಾಥಮಿಕ ಮಿಯಾಪುರ ಶಾಲೆಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಅಂಗವಾಗಿ ವಿಜ್ಞಾನ ವಸ್ತು ಪ್ರದರ್ಶನ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ರಾಜ್ಯ ಪ್ರಶಸ್ತಿ ಪುರಸ್ಕೃತ ಬಸವರಾಜ ವಾಲಿಕಾರ ಮಾತನಾಡಿ, ಇಂದು ವಿಜ್ಞಾನ ಜನಸಾಮಾನ್ಯರಿಗೂ ತಲುಪಿ ಅವರ ಜೀವನ ಸುಖಮಯವಾಗಿ ಬದುಕು ಹಸನವಾಗಿಸುವುದೇ ವಿಜ್ಞಾನದ ಉದ್ದೇಶ. ದೇಶ ಪ್ರಗತಿ ಹೊಂದಿ ಶಾಂತಿಯಿಂದಿರಲು ಸಾಧ್ಯ ಎಂದರು.

ಮುಖ್ಯಶಿಕ್ಷಕ ಖಾಜಾಹುಸೇನ ಒಂಟೆಳಿ ಮಾತನಾಡಿ, ಮಕ್ಕಳಲ್ಲಿರುವ ಪ್ರತಿಭೆ ಹೊರಹಾಕಲು ಮತ್ತು ಅವರಿಗೆ ಸಮರ್ಥವಾಗಿ ಬೆಳೆಸುವ ಉದ್ದೇಶವಿದೆ. ತಾಂತ್ರಿಕವಾಗಿ ಬೆಳೆಯುತ್ತಿರುವ ಯುಗದಲ್ಲಿ ಮಕ್ಕಳು ಆಸಕ್ತಿ ವಹಿಸಿ ಕಲಿಯಬೇಕು ಎಂದರು.



ಮಿಯಾಪುರ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ವಿದ್ಯಾರ್ಥಿಗಳಿಂದ ರಾಷ್ಟ್ರೀಯ ವಿಜ್ಞಾನ ಪ್ರದರ್ಶನ ನಡೆಯಿತು.

■ ಮಕ್ಕಳಲ್ಲಿರುವ ವೈಜ್ಞಾನಿಕ ಪ್ರತಿಭೆಯನ್ನು ಪ್ರಯೋಗಗಳ ಮೂಲಕ ಹೊರಹಾಕಲು ಇದು ಒಂದು ಸೂಕ್ತ ಸಂದರ್ಭ ಜನರಲ್ಲಿರುವ ಮೌಢ್ಯತೆ ಹೋಗಲಾಡಿಸಲು ವೈಜ್ಞಾನಿಕ ಮನೋಭಾವನೆ ಬೆಳೆಸಲು ವಿಜ್ಞಾನ ದಿನಾಚರಣೆ ಬೇಕು.

ವಿಜ್ಞಾನ ಶಿಕ್ಷಕ ಪರಶುರಾಮ ನಾಗಣ್ಣವರ ಪ್ರಸ್ತಾವಿಕವಾಗಿ ಮಾತನಾಡಿ, ಮಕ್ಕಳಲ್ಲಿರುವ ವೈಜ್ಞಾನಿಕ ಪ್ರತಿಭೆಯನ್ನು ಪ್ರಯೋಗಗಳ ಮೂಲಕ ಹೊರಹಾಕಲು ಇದು ಒಂದು ಸೂಕ್ತ ಸಂದರ್ಭ ಜನರಲ್ಲಿರುವ ಮೌಢ್ಯತೆ ಹೋಗಲಾಡಿಸಲು ವೈಜ್ಞಾನಿಕ ಮನೋಭಾವನೆ ಬೆಳೆಸಲು ಇಂತಹ ರಾಷ್ಟ್ರೀಯ ವಿಜ್ಞಾನ ದಿನಾಚರಣೆ ಬೇಕು ಎಂದರು.

ಸ್ಪರ್ಧೆಯಲ್ಲಿ ಪ್ರಥಮ, ದ್ವಿತೀಯ, ತೃತೀಯ ಸ್ಥಾನ ಪಡೆದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಕಾರ್ಯಕ್ರಮದ ಅಧ್ಯಕ್ಷತೆ ಎಸ್ಡಿಎಂಸಿ ಅಧ್ಯಕ್ಷ ನಾಗಪ್ಪ ಅಧ್ಯಕ್ಷತೆ ವಹಿಸಿದ್ದರು. ಗವಿಸಿದ್ದಪ್ಪ ಕುದುರಿ, ಶರಣಗೌಡ ಮ್ಯಾಗೇರಿ, ದುರಗೇಶ, ಟಾಟಾ ಟ್ರಸ್ಟ್‌ನ ನೋಡಲ್ ಅಧಿಕಾರಿ ರಾಜಕುಮಾರ, ನಾಗರಾಜ ಪೊಲೀಸಪಾಟೀಲ, ನಿಂಗನಗೌಡ ಹೊಸೂರ, ಶರಣಪ್ಪ ರಾಮವಾಡಗಿ, ಗೋವಿಂದಪ್ಪ, ಭೀಮಣ್ಣ ಹೊಸಮನಿ, ಕನಕರಾಯ ಉಪ್ಪೇರಿ, ಪರಶುರಾಮ ಪೂಜಾರಿ, ಶಿಕ್ಷಕರಾದ ಸದಾಶಿವಯ್ಯ ಶಿರೂರ, ನಾಗನಗೌಡ ಪೊಲೀಸ ಪಾಟೀಲ, ಶಾಂತಾಬಾಯಿ ಪಟ್ಟಣಶೆಟ್ಟಿ, ಪರಶುರಾಮ ನಾಗಣ್ಣವರ, ಜಯಶ್ರೀ ಮದ್ಲೂರ, ಲಕ್ಷ್ಮಿ ವಾಲಿಕಾರ, ಸುಮಂಗಲಾ ಕುದುರಿ ಇದ್ದರು.

# ಮಕ್ಕಳಲ್ಲಿ ಮೌಲ್ಯಗಳನ್ನು ಬೆಳೆಸಿ: ಖಾಜಾಹುಸೇನ

ಪ್ರಜಾವಾಣಿ ವಾರ್ತೆ



ಹನುಮಸಾಗರದ ಪ್ರಾ. ಸಕರಾಗಿ ಆಗಮಿಸಿದ ರಾಮಚಂದ್ರ ಬಡಿಗೇರ ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು

ಹನುಮಸಾಗರ: 'ಪೋಷಕರು ಮಕ್ಕಳಿಗೆ ಬದುಕಿನಲ್ಲಿ ಮೌಲ್ಯ ಹಾಗೂ ಒಳಿತಿನ ಉಪದೇಶ ಮಾಡಬೇಕು' ಎಂದು ಮುಖ್ಯಶಿಕ್ಷಕ ಖಾಜಾಹುಸೇನ ಒಂಟೆಳಿ ಹೇಳಿದರು.

ಸಮೀಪದ ಮಿಯ್ಯಾಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ 'ನಾವು ಮನುಜರು' ಎಂಬ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, 'ಸರ್ಕಾರದ ಈ ಕಾರ್ಯಕ್ರಮ ಬಹಳ ವಿಶಿಷ್ಟವಾಗಿದೆ. ಮಕ್ಕಳಲ್ಲಿ ಸಾಮಾಜಿಕ ಸಾಮರಸ್ಯ, ವೈಜ್ಞಾನಿಕ ಮನೋಭಾವ, ಸಹಬಾಳ್ವೆ, ಪರಿಸರ ಪ್ರಜ್ಞೆಯನ್ನು ಬೆಳೆಸಲು ಉತ್ತಮ ವೇದಿಕೆಯಾಗಿದೆ' ಎಂದು ಹೇಳಿದರು.

ರಾಮಚಂದ್ರ ಬಡಿಗೇರ ಮಾತನಾಡಿ, 'ಮನುಜ ಮತ, ವಿಶ್ವಪಥ ಎಂದು ರಾಷ್ಟ್ರಕವಿ ಕುವೆಂಪು ಹೇಳಿದ್ದಾರೆ. ಮಕ್ಕಳು ಮನುಕುಲದ ಆಶಾ ಕುಸುಮಗಳು, ನಾಡಿನ ಭಾಗ್ಯೋದಯ ಶಿಲ್ಪಿಗಳು, ಮನೆಯಂಗಳ ಬೆಳಗಿಸುವ ದೀಪಗಳು. ಅವು ಆರದಂತೆ, ಬತ್ತದಂತೆ ಎಚ್ಚರಿಕೆ ವಹಿಸಬೇಕಾಗಿದೆ. ಆಕೃತಿಯಿಂದ ಮನುಷ್ಯರಾಗದೆ ಕೃತಿಯಿಂದ ಮನುಜರಾಗೋಣ' ಎಂದು ಹೇಳಿದರು.

ಹಿರಿಯ ಶಿಕ್ಷಕ ನಾಗನಗೌಡ ಪೊಲೀಸ್ ಪಾಟೀಲ, ಪರಶುರಾಮಪ್ಪ ನಾಗಣ್ಣವರ, ಶಾಂತಾಬಾಯಿ ಪಟ್ಟಣಶೆಟ್ಟಿ, ಲಕ್ಷ್ಮಿ ವಾಲಿಕಾರ, ಸುಜಾತಾ ಗುಡುಗಲದಿನ್ನಿ ಸುಮಂಗಲಾ ಕುದುರಿ, ಆಲಮ್ಮ ಹೊಸೂರು ಇತರರು ಉಪಸ್ಥಿತರಿದ್ದರು.

# 'ಆಕೃತಿಯಿಂದ ಮನುಷ್ಯರಾಗದೆ ಕೃತಿಯಿಂದ ಮನುಜರಾಗಿ'



**ಹನುಮಸಾಗರ(ತಾ:ಕುಷ್ಟಗಿ)** : ಆಕೃತಿಯಿಂದ ಮನುಷ್ಯರಾಗದೆ ಕೃತಿಯಿಂದ ಮನುಜರಾಗೋಣ ಆಕರ್ಷಣೆಯಿಂದ ಮನುಜರಾಗದೆ ಆಚರಣೆಯಿಂದ ಮನುಷ್ಯರಾಗೋಣ ಎಂದು ಉಪನ್ಯಾಸಕ ರಾಮಚಂದ್ರ ಬಡಿಗೇರ ಹೇಳಿದರು.

ಸಮೀಪದ ಮಿಯ್ಯಾಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ 'ನಾವು–ಮನುಜರು' ಎಂಬ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಮನುಜ ಮತ ವಿಶ್ವಪಥ ಎನ್ನುವ ರಾಷ್ಟ್ರಕವಿ ಕುವೆಂಪುರವರ ಉಕ್ತಿಯನ್ನು ಸ್ಮರಿಸಿಕೊಳ್ಳುತ್ತಾ ಮಕ್ಕಳು ಮನುಕುಲದ ಆಶಾ ಕುಸುಮಗಳು. ನಾಡಿನ ಭಾಗ್ಯೋದಯ ಶಿಲ್ಪಿಗಳು. ಮನೆಯಂಗಳ ಬೆಳಗುವ ದೀಪಗಳು. ಈ ದೀಪಗಳು ಆರದಂತೆ ಬತ್ತದಂತೆ ಎಚ್ಚರಿಕೆ ವಹಿಸಬೇಕಾಗಿರುವುದು ಎಲ್ಲರ ಕರ್ತವ್ಯವಾಗಿದೆ. ಮೊದಲು ನಮ್ಮನ್ನು ನಾವು ಪ್ರೀತಿಸುವುದರ ಜೊತೆಗೆ ನನ್ನ ಕುಟುಂಬದವರನ್ನು, ನೆರೆಹೊರೆಯವರನ್ನು, ಸಮಾಜವನ್ನು, ದೇಶವನ್ನು ಪ್ರೀತಿಸುವ ಗುಣ ಎಲ್ಲರಲ್ಲಿಯೂ ಬೆಳೆಯಬೇಕು ಎಂದರು.

ಮುಖ್ಯ ಶಿಕ್ಷಕ ಖಾಜಾಹುಸೇನ ಒಂಟೆಳಿ ಮಾತನಾಡಿ, ಸರ್ಕಾರದ ಆದೇಶದಂತೆ ನಾವು ಮನುಜರು ಎಂಬ ನೂತನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದ್ದು, ಇದು ಬಹಳ ವಿಶಿಷ್ಟವಾದ ಕಾರ್ಯಕ್ರಮವಾಗಿದೆ. ಒಳಿತಿನ ಉಪದೇಶ ಮತ್ತು ಉತ್ತಮ ಮೌಲ್ಯಗಳನ್ನು ಮಕ್ಕಳು ಬದುಕಿನಲ್ಲಿ ಅಳವಡಿಸಿಕೊಳ್ಳಲು, ಮಕ್ಕಳಲ್ಲಿ ಸಾಮಾಜಿಕ ಸಾಮರಸ್ಯ, ವೈಜ್ಞಾನಿಕ ಮನೋಭಾವ, ಸಹಬಾಳ್ವೆ, ಪರಿಸರ ಪ್ರಜ್ಞೆ, ಅಸಮಾನತೆ, ಮೌಲ್ಯಾಧಾರಿತ ಶಿಕ್ಷಣದೊಂದಿಗೆ ವಿಶಿಷ್ಟ ಶಿಕ್ಷಣದ ಕೇಂದ್ರಗಳನ್ನಾಗಿ ಅನುಷ್ಠಾನಗೊಳಿಸುವ ಉದ್ದೇಶ ಹೊಂದಲಾಗಿದೆ ಎಂದರು. ಹಿರಿಯ ಶಿಕ್ಷಕ ನಾಗನಗೌಡ ಪೊಲೀಸಪಾಟೀಲ, ಪರಶುರಾಮಪ್ಪ ನಾಗಣ್ಣವರ, ಲಕ್ಷ್ಮೀ ವಾಲಿಕಾರ, ಸುಜಾತ ಗುಡುಗಲದಿನ್ನಿ, ಸುಮಂಗಲಾ ಕುದುರಿ ಮುಂತಾದವರು ಉಪಸ್ಥಿತರಿದ್ದರು.

# ಮಿಯ್ಯಾಪುರ ಗ್ರಾಮದಲ್ಲಿ ಗ್ರಂಥಾಲಯ ಉದ್ಘಾಟನೆ



**ಕುಷ್ಟಗಿ,ಫೆ.20–** ತಾಲೂಕಿನ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ, ಮಿಯ್ಯಾಪುರ ಶಾಲೆಯಲ್ಲಿ ಶಿಕ್ಷಣ ಇಲಾಖೆ ಮತ್ತು ಕಲಿಕಾ ಟಾಟಾ ಟ್ರಸ್ಟ್ ಸಹಯೋಗದಲ್ಲಿ ಗ್ರಂಥಾಲ ಯದ ಉದ್ಘಾಟನೆ ನೆರವೇರಿ ಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಎಸ್ಡಿಎಂಸಿ ಅಧ್ಯಕ್ಷರಾದ ನಾಗಪ್ಪ ಎಂ,ಇವರು ವಹಿಸಿದ್ದರು. ಉದ್ಘಾಟನೆಯನ್ನು ಅಡವಿಭಾವಿ ಪಂಚಾ ಯತ್ ಅಧ್ಯಕ್ಷರಾದ ಶರಣಪ್ಪ ಮದ್ಲೂರು ಇವರು ನೆರವೇರಿಸಿ ಮಾತನಾಡಿ ಮಕ್ಕಳ ಮೊಬೈಲ್ ಬಿಟ್ಟು ಪುಸ್ತಕ ಓದುವ ಹವ್ಯಾಸವನ್ನು ಬೆಳೆಸಿಕೊಳ್ಳಬೇಕು ಎಂದು ಹೇಳಿ ದರು. ಮುಖ್ಯ ಶಿಕ್ಷಕ ಖಾಜಾಹುಸೇನ ಒಂಟೆಳಿ ಮಾತನಾಡಿ ಒಂದು ರಾಷ್ಟ್ರದ ಅಭಿವೃದ್ಧಿಯಲ್ಲಿ ಗ್ರಂಥಾಲಯಗಳ ಪಾತ್ರ ಬಹಳ ಪ್ರಮುಖವಾದದ್ದು, ಗ್ರಂಥಾಲಯಗಳು ಜ್ಞಾನದಾನದ ಕೇಂದ್ರಗಳಾಗಿವೆ. ವ್ಯಕ್ತಿಯ ಜ್ಞಾನವ ನ್ನು ವಿಸ್ತರಿಸಲು ಗ್ರಂಥಾಲಯ ಬಹಳ ಉಪಯುಕ್ತ ಮಾಧ್ಯಮವಾಗಿದೆ. ಪುಸ್ತಕ ಮನುಷ್ಯನ ಮಿತ್ರ ಜ್ಞಾನ ನೀಡುವ ಕಾಮಧೇನು ವ್ಯಕ್ತಿತ್ವ ನಿರ್ಮಾಣದ ಹೆಬ್ಬಾಗಿಲು ಓದುಗರಿಗೆ ಗ್ರಂಥಾಲಯ ಒಂದು ವರವಿದ್ದಂತೆ, ನಮ್ಮ ಶಾಲೆಯ ಗ್ರಂಥಾಲಯದಲ್ಲಿನ ಪುಸ್ತಕಗಳನ್ನು ಮಕ್ಕಳು ಓದುವುದರ ಮೂಲಕ ಹೆಚ್ಚಿನ ಜ್ಞಾನ ಸಂಪಾದಿಸಿ ಉತ್ತಮ ಪ್ರಜೆಗಳಾಗಿರಿ ಮತ್ತು ಟಾಟಾ ಟ್ರಸ್ಟಿನ ಕಾರ್ಯ ಶ್ಲಾಘನೀ ಯವಾಗಿದೆ ಎಂದು ಹೇಳಿದರು.

ಟಾಟಾ ಟಸ್ಟಿನ ನೋಡಲ್ ಅಧಿಕಾರಿಗಳಾದ ರಾಜಕುಮಾರ ಪ್ರಾಸ್ತಾವಿಕವಾಗಿ– ಮಾತನಾಡಿ ಮಕ್ಕಳ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಎಲ್ಲಾ ರೀತಿಯ ಪುಸ್ತಕಗಳು ಇದ್ದು, ಮಕ್ಕಳು ಅದರ ಸದುಪಯೋಗ ಪಡಿಸಿಕೊಳ್ಳಬೇಕು ಎಂದರು.ಮುಖ್ಯ ಅತಿಥಿಗಳಾಗಿ ಗ್ರಾಮ ಪಂಚಾಯತ್ ಸದಸ್ಯರಾದ ಗವಿಸಿದ್ದಪ್ಪ ಕುದುರಿ, ಶರಣಗೌಡ ಮ್ಯಾಗೇರಿ ಆಗಮಿಸಿ ದ್ದರು ಶಾಂತಾಬಾಯಿ ಪಟ್ಟಣಶೆಟ್ಟಿ ಪರಶುರಾಮ ನಾಗಣ್ಣನವರ ಮಾತನಾಡಿದರು.

ಮುಖ್ಯ ಶಿಕ್ಷಕ ಖಾಜಾಹುಸೇನ ಒಂಟೆಳಿ ಟಾಟಾ ಟ್ರಸ್ಟ್ ನ ನೋಡಲ್ ರಾಜಕುಮಾರ ಶಿಕ್ಷಕರಾದ ಸದಾಶಿವಯ್ಯ ಶಿರೂರ ನಾಗನಗೌಡ ಪೊಲೀಸ್ ಪಾಟೀಲ್ ಶಾಂತಾಬಾಯಿ ಪಟ್ಟಣಶೆಟ್ಟಿ ಪರಶುರಾಮ ನಾಗಣ್ಣನವರ ಅಕ್ಕಮಹಾದೇವಿ ಹಿರೇಮಠ ಜಯಶ್ರೀ ಮದ್ಲೂರ ಲಕ್ಷ್ಮೀ ವಾಲಿಕಾರ ಸುಮಂಗಲಾ ಕುದುರಿ ಮತ್ತು ಮಕ್ಕಳು ಉಪಸ್ಥಿತರಿದ್ದರು.ಕಾರ್ಯಕ್ರಮವನ್ನು ನಾಗನಗೌಡ ಪೊಲೀಸ್ ಪಾಟೀಲ್ ನಿರೂಪಿಸಿ, ವಂದಿಸಿದರು.

# ಮೀಯಾಪುರ ನಲಿಕಲಿ ತರಗತಿ ವಿದ್ಯಾರ್ಥಿಗಳೊಂದಿಗೆ ಸಂವಾದ



**ಹನುಮಸಾಗರ: ಮೀಯಾಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಲಿ–ಕಲಿ ತರಗತಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಯಿತು.**

**■ ಉದಯವಾಣಿ ಸಮಾಚಾರ**

**ಹನುಮಸಾಗರ:** ಮೀಯಾಪುರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಕಲಿಕಾ ಟಾಟಾ ಟ್ರಸ್ಟ್ ಮುಂಬೈನ ಶಾಲೆಗೆ ಭೇಟಿ ನೀಡಿ ನಲಿ–ಕಲಿ ತರಗತಿಗಳ ಸಮಗ್ರ ವೀಕ್ಷಣೆ ಮಾಡಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿದರು.

ಮುಖ್ಯಶಿಕ್ಷಕ ಖಾಜಾಹುಸೇನ್ ಒಂಟೇಳಿ ಮಾತನಾಡಿ, ಕಲಿಕಾ ಟಾಟಾ ಟ್ರಸ್ಟ್‌ನವರ ಸೇವೆ ಅಮೂಲ್ಯವಾದುದ್ದು, ಅವರ ಸೇವೆಯಿಂದ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಪೂರಕವಾಗಿದೆ ಎಂದು ಹೇಳಿದರು.

ಕೊಪ್ಪಳ ವ್ಯವಸ್ಥಾಪಕ ಶಿವಕುಮಾರ್ ಯಾದವ ಪ್ರಾಸ್ತಾವಿಕ ಮಾತನಾಡಿ, ಟಾಟಾ ಟ್ರಸ್ಟ್‌ನ ನಲಿ ಕಲಿ ತರಗತಿಗಳ ಕಾರ್ಯಕ್ರಮ ಮತ್ತು ಗುರಿ ಹಾಗೂ ಉದ್ದೇಶಗಳ ಬಗ್ಗೆ ವಿಸ್ತಾರವಾಗಿ ತಿಳಿಸಿಕೊಟ್ಟರು.

ತಾಲೂಕು ನೋಡಲ್ ವೀರೇಶ್ ಹಂಚಿನಾಳ, ರಾಜಕುಮಾರ ಕುಂಬಾರ, ಶಿಕ್ಷಕರಾದ ಸದಾಶಿವಯ್ಯ ಹಿರೇಮಠ, ನಾಗನಗೌಡ ಪೊಲೀಸ್ ಪಾಟೀಲ್, ಶಾಂತಾಬಾಯಿ ಪಟ್ಟಣಶೆಟ್ಟಿ, ಪರಶುರಾಮ ನಾಗಣ್ಣನವರ, ಅಕ್ಕಮಹಾದೇವಿ, ಹಿರೇಮಠ ಜಯಶ್ರೀ ಮದ್ಲೂರ, ಲಕ್ಷ್ಮೀ ವಾಲಿಕಾರ ಸುಮಂಗಲಾ ಕುದುರಿ ಮತ್ತು ಮಕ್ಕಳು ಇದ್ದರು.

# ಎಲ್ಲ ಕ್ಷೇತ್ರಗಳಲ್ಲಿ ವಿಶೇಷಚೇತನರ ಸಾಧನೆ

**ಹನುಮಸಾಗರ(ತಾ:ಕುಷ್ಟಗಿ):** ಇಂದು ವಿಶೇಷಚೇತನರು ತಾವು ಯಾರಿಗೂ ಕಮ್ಮಿ ಇಲ್ಲ ಎಂಬಂತೆ ಎಲ್ಲ ಕ್ಷೇತ್ರಗಳಲ್ಲೂ ಸಾಧನೆ ಮಾಡಿ, ಸಾಬೀತು ಮಾಡಿದ್ದಾರೆ. ಇತರರಿಗೂ ಮಾದರಿಯಾಗಿದ್ದಾರೆ ಎಂದು ಮುಖ್ಯ ಶಿಕ್ಷಕ ಖಾಜಾಹುಸೇನ್ ಒಂಟೆಳಿ ಹೇಳಿದರು.

ಸಮೀಪದ ಮಿಯ್ಯಾಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಏರ್ಪಡಿಸಿದ್ದ, ವಿಶ್ವ ವಿಶೇಷಚೇತನರ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ವಿಶೇಷಚೇತನರನ್ನು ಸಮಾಜದ ಮುಖ್ಯ ವಾಹಿನಿಗೆ ತರುವ ಜಾಗೃತಿ, ಸಮಾನ ಅವಕಾಶ ಹಾಗೂ ಸೌಲಭ್ಯ ಕಲ್ಪಿಸುವುದು ಈ ದಿನದ ಉದ್ದೇಶವಾಗಿದೆ. ವಿಶೇಷಚೇತನ ಹಕ್ಕುಗಳನ್ನು ಅರಿತುಕೊಳ್ಳುವ ಬದ್ಧತೆ ಹೊಂದಿದೆ. ಆ ನಿಟ್ಟಿನಲ್ಲಿ ಸರ್ಕಾರ, ಸಾರ್ವಜನಿಕ ಮತ್ತು ಖಾಸಗಿ ವಲಯಗಳ ಸಹಯೋಗದೊಂದಿಗೆ ವಿಶೇಷಚೇತನರ ಸಮಸ್ಯೆಗಳನ್ನು ಆಲಿಸುವುದು, ಅವರ ಘನತೆ, ಗೌರವ, ಹಕ್ಕುಗಳು ಮತ್ತು ಯೋಗಕ್ಷೇಮಕ್ಕಾಗಿ ಹಾಗೂ ಬೆಂಬಲವನ್ನು ನೀಡುವ ಗುರಿ ಹೊಂದಲಾಗಿದೆ ಎಂದು ತಿಳಿಸಿದರು.

ಹಿರಿಯ ಶಿಕ್ಷಕ ನಾಗನಗೌಡ ಪೊಲೀಸ್‌ಪಾಟೀಲ, ಶಾಂತಬಾಯಿ ಪಟ್ಟಣಶೆಟ್ಟಿ, ಪರಶುರಾಮಪ್ಪ ನಾಗಣ್ಣನವರ, ಆಲಮ್ಮ ಹೊಸೂರು ಮಾತನಾಡಿದರು. ಲಕ್ಷ್ಮೀ ವಾಲಿಕಾರ, ಸುಜಾತಾ ಗುಡಗಲದ್ದಿನ್ನಿ ಹಾಗೂ ಇತರರು ಇದ್ದರು.



ಹನುಮಸಾಗರ ಸಮೀಪದ ಮಿಯ್ಯಾಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಏರ್ಪಡಿಸಿದ್ದ, ವಿಶ್ವ ವಿಶೇಷಚೇತನರ ದಿನಾಚರಣೆ ಕಾರ್ಯಕ್ರಮದಲ್ಲಿ ಮುಖ್ಯ ಶಿಕ್ಷಕ ಖಾಜಾಹುಸೇನ್ ಒಂಟೆಳಿ ಮಾತನಾಡಿದರು.

# ಸತತ ಪ್ರಯತ್ನದಿಂದ ಸಾಧನೆ ಸಾಧ್ಯ

**ಹನುಮಸಾಗರ:** ಸ್ಪರ್ಧಾತ್ಮಕ ಯುಗದಲ್ಲಿ ವಿದ್ಯಾರ್ಥಿಗಳು ಯಶಸ್ಸು ಹಾಗೂ ಉನ್ನತ ಹುದ್ದೆಗೇರಲು ನಿರಂತರ ಅಭ್ಯಾಸ ಮಾಡಬೇಕು ಎಂದು ನೂತನ ಪಿಎಸ್‌ಐ ಸುನೀತಾ ವಿರೂಪಾಕ್ಷಗೌಡ ಮ್ಯಾಗೇರಿ ಹೇಳಿದರು.

ಸಮೀಪದ ಮಿಯ್ಯಾಪೂರದಿಂದ ಪಿಎಸ್‌ಐ ಹುದ್ದೆಗೆ ನೇಮಕವಾಗಿದ್ದಕ್ಕೆ ಗ್ರಾಮಸ್ಥರಿಂದ ಬುಧವಾರ ಸನ್ಮಾನ ಸ್ವೀಕರಿಸಿ ಮಾತನಾಡಿದರು. ನಿರಂತರ ಓದು, ಸತತ ಪ್ರಯತ್ನದಿಂದ ಸಾಧನೆ ಸಾಧ್ಯ. ವಿದ್ಯಾರ್ಥಿಗಳು ಪಾಲಕರ ಶ್ರಮ ಅರಿತು ಜ್ಞಾನ ಸಂಪಾದಿಸಿ, ಉತ್ತಮ ಭವಿಷ್ಯ ರೂಪಿಸಿಕೊಳ್ಳಬೇಕು. ಗಂಡು-ಹೆಣ್ಣು ಎಂದು ಭೇದ ಮಾಡದೆ ಸಮನಾಗಿ ಶಿಕ್ಷಣ ಕೊಡಿಸಬೇಕು ಎಂದರು. ಮುಖ್ಯಶಿಕ್ಷಕ ಖಾಜಾಸೇನ ಒಂಟೆಳಿ ಮಾತನಾಡಿ, ವಿದ್ಯಾರ್ಥಿಗಳಲ್ಲಿ ಆತ್ಮಶಕ್ತಿ, ದೃಢಸಂಕಲ್ಪ, ಕ್ರಿಯಾಶೀಲತೆ ಹಾಗೂ ಸಾಧಿಸುವ ಇಚ್ಛಾಶಕ್ತಿ ಇದ್ದರೆ ಏನನ್ನಾದರೂ ಸಾಧಿಸಬಹುದು ಎಂದರು. ಎಸ್ಡಿಎಂಸಿ ಅಧ್ಯಕ್ಷ ಎಂ.ನಾಗಪ್ಪ, ಶಿಕ್ಷಕರಾದ ನಾಗನಗೌಡ ಪೊಲೀಸ್ ಪಾಟೀಲ್, ಶಾಂತಾಬಾಯಿ ಪಟ್ಟಣಶೆಟ್ಟಿ, ಲಕ್ಷ್ಮೀ ವಾಲಿಕಾರ, ಸುಜಾತಾ ಗುಡಗಲದ್ದಿನ್ನಿ, ಆಲಮ್ಮ ಹೊಸೂರ, ಪ್ರಮುಖರಾದ ವಿರೂಪಾಕ್ಷಗೌಡ ಮ್ಯಾಗೇರಿ, ರಾಮನಗೌಡ ಪೊಲೀಸ್‌ಪಾಟೀಲ್, ಯಲ್ಲಪ್ಪ ಕುದುರಿ, ನಾಗಬಸಮ್ಮ ಮ್ಯಾಗೇರಿ, ರಾಮನಗೌಡ ಮ್ಯಾಗೇರಿ ಇತರರಿದ್ದರು.

ವಿಜಯವಾಣಿ ಚಿತ್ರ



ಹನುಮಸಾಗರ ಸಮೀಪದ ಮಿಯ್ಯಾಪೂರದಲ್ಲಿ ಪಿಎಸ್‌ಐ ಹುದ್ದೆಗೆ ಆಯ್ಕೆಯಾದ ಸುನೀತಾ ಮ್ಯಾಗೇರಿ ಹಾಗೂ ಪಾಲಕರನ್ನು ಗ್ರಾಮಸ್ಥರು ಸನ್ಮಾನಿಸಿದರು. ಎಸ್ಡಿಎಂಸಿ ಅಧ್ಯಕ್ಷ ಎಂ.ನಾಗಪ್ಪ, ಶಿಕ್ಷಕರಾದ ನಾಗನಗೌಡ ಪೊಲೀಸ್ ಪಾಟೀಲ್, ಶಾಂತಾಬಾಯಿ ಪಟ್ಟಣಶೆಟ್ಟಿ, ಲಕ್ಷ್ಮೀ ವಾಲಿಕಾರ, ಸುಜಾತಾ ಗುಡಗಲದ್ದಿನ್ನಿ, ಆಲಮ್ಮ ಹೊಸೂರ ಇದ್ದರು.

ಕನ್ನಡಪ್ರಭ

# ಮಕ್ಕಳನ್ನು ರಕ್ಷಿಸುವ ಹೊಣೆ ಎಲ್ಲರದ್ದು

## ಮಕ್ಕಳ ಹಕ್ಕುಗಳ ರಕ್ಷಣೆ, ರಸಪ್ರಶ್ನೆ ಕಾರ್ಯಕ್ರಮದಲ್ಲಿ ಒಂಟೆಳಿ



ಹನುಮಸಾಗರದ ಸಮೀಪದ ಮಿಯಾಪುರ ಶಾಲೆಯಲ್ಲಿ ಮಕ್ಕಳ ಹಕ್ಕುಗಳ ರಕ್ಷಣೆ ಮತ್ತು ರಸಪ್ರಶ್ನೆ ಕಾರ್ಯಕ್ರಮದಲ್ಲಿ ಮುಖ್ಯ ಶಿಕ್ಷಕ ಖಾಜಾಹುಸೇನ ಒಂಟೆಳಿ ಮಾತನಾಡಿದರು.

- ಮಕ್ಕಳ ಹಕ್ಕು ಮತ್ತು ಕಾಯ್ದೆಗಳನ್ನು ಪಾಲಿಸುವುದು ಮತ್ತು ಕಾಪಾಡಿಕೊಳ್ಳುವುದು ಕೂಡ ನಮ್ಮೆಲ್ಲರ ಕರ್ತವ್ಯವಾಗಿದೆ.
- ಮಕ್ಕಳು ಪಾಲಕರ ಮತ್ತು ಶಿಕ್ಷಕರ ಮಾರ್ಗದರ್ಶನದಲ್ಲಿ ಅತ್ಯುತ್ತಮ ಶಿಕ್ಷಣ ಪಡೆದು ಉತ್ತಮ ಪ್ರಜೆಗಳಾಗಿ ಸಮುದಾಯದ ಏಳಿಗೆಗೆ ಶ್ರಮಿಸುವ ವ್ಯಕ್ತಿಗಳಾಗಬೇಕು.
- ಮಕ್ಕಳ ರಕ್ಷಣೆಗಾಗಿ ಪ್ರಮುಖ ಕಾಯಿದೆಗಳ ಮಾಹಿತಿ ಪಡೆಯಿರಿ.

• **ಕನ್ನಡಪ್ರಭ ವಾರ್ತೆ** ಹನುಮಸಾಗರ

ದೇಶದ ಒಳತಿಗೆ, ಅಭಿವೃದ್ಧಿಗಾಗಿ ಮಕ್ಕಳನ್ನು ರಕ್ಷಿಸುವುದು ಪಾಲಕರು, ಶಿಕ್ಷಕರು, ನಾಗರಿಕರ ಜವಾಬ್ದಾರಿಯಾಗಿದೆ ಎಂದು ಮುಖ್ಯ ಶಿಕ್ಷಕ ಖಾಜಾಹುಸೇನ ಒಂಟೆಳಿ ಹೇಳಿದರು.

ಸಮೀಪದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಮಿಯಾಪುರ ಶಾಲೆಯಲ್ಲಿ ಸಂಭ್ರಮ ಕಾರ್ಯಕ್ರಮ ನಿಮಿತ್ತ ಮಕ್ಕಳ ಹಕ್ಕುಗಳ ರಕ್ಷಣೆ ಮತ್ತು ರಸಪ್ರಶ್ನೆ ಕಾರ್ಯಕ್ರಮದಲ್ಲಿ ಮಾತನಾಡಿದರು.

ಮಕ್ಕಳ ಪ್ರಮುಖ ಹಕ್ಕುಗಳಾದ ಬದುಕುವ ಹಕ್ಕು, ರಕ್ಷಣೆ ಹಕ್ಕು, ವಿಕಾಸ ಹೊಂದುವ ಹಕ್ಕು, ಭಾಗವಹಿಸುವ ಹಕ್ಕು. ಮಕ್ಕಳ ರಕ್ಷಣೆಗಾಗಿ ಪ್ರಮುಖ ಕಾಯಿದೆಗಳಾದ ಮಕ್ಕಳ ನ್ಯಾಯ ಕಾಯ್ದೆ, ಬಾಲ್ಯ ವಿವಾಹ ನಿಷೇಧ ಕಾಯ್ದೆ, ಮಕ್ಕಳ ಮೇಲಿನ ಲೈಂಗಿಕ ತಡೆ ಅಪರಾಧ ಕಾಯ್ದೆ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು ಕಾಯ್ದೆ, ಬಾಲಕಾರ್ಮಿಕ ನಿಷೇಧ ಕಾಯ್ದೆಗಳು ಕೂಡ ಇವೆ. ಮಕ್ಕಳ ಹಕ್ಕು ಮತ್ತು ಕಾಯ್ದೆಗಳನ್ನು ಪಾಲಿಸುವುದು ಮತ್ತು ಕಾಪಾಡಿಕೊಳ್ಳುವುದು ಕೂಡ ನಮ್ಮೆಲ್ಲರ ಕರ್ತವ್ಯವಾಗಿದೆ. ಮಕ್ಕಳು ಪಾಲಕರ ಮತ್ತು ಶಿಕ್ಷಕರ ಮಾರ್ಗದರ್ಶನದಲ್ಲಿ ಅತ್ಯುತ್ತಮ ಶಿಕ್ಷಣ ಪಡೆದು ಉತ್ತಮ ಪ್ರಜೆಗಳಾಗಿ ಸಮುದಾಯದ ಏಳಿಗೆಗೆ ಶ್ರಮಿಸುವ ವ್ಯಕ್ತಿಗಳಾಗಬೇಕು ಎಂದರು.

ಹಿರಿಯ ಶಿಕ್ಷಕ ಸದಾಶಿವಯ್ಯ ಹಿರೇಮಠ ಪ್ರಾಸ್ತಾವಿಕವಾಗಿ ಮಾತನಾಡಿದರು.

ಶಿಕ್ಷಕ ನಾಗನಗೌಡ ಪೊಲೀಸ್ ಪಾಟೀಲ್, ಪರಶುರಾಮಪ್ಪ ನಾಗಣ್ಣನವರ್, ಜಯಶ್ರೀ ಮದ್ಲೂರ, ಲಕ್ಷ್ಮಿ ವಾಲಿಕಾರ್, ಸುಮಂಗಲಾ ಕುದುರಿ ಮಾತನಾಡಿದರು. ಗ್ರಾಪಂ ಅಧ್ಯಕ್ಷ ಶರಣಪ್ಪ ಮದ್ಲೂರ, ಉಪಾಧ್ಯಕ್ಷೆ ಶರಣಮ್ಮ ಮ್ಯಾಗೇರಿ, ಸದಾಶಿವಯ್ಯ ಹಿರೇಮಠ, ನಾಗನಗೌಡ ಪೊಲೀಸ ಪಾಟೀಲ, ಪರಶುರಾಮಪ್ಪ, ಜಯಶ್ರೀ ಮದ್ದೂರ, ಲಕ್ಷ್ಮಿ ವಾಲಿಕಾರ, ಸುಮಂಗಲ ಕುದುರಿ ಇದ್ದರು.



ಕನ್ನಡಪ್ರಭ

**ಪಠ್ಯಪುಸ್ತಕ...** ಉಚಿತ ಪಠ್ಯಪುಸ್ತಕ ವಿತರಿಸಿದ ಸಿಆರ್‌ಪಿ ಅಯ್ಯಪ್ಪ

# ಶಿಕ್ಷಣ ಪಡೆದು ಉತ್ತಮ ಪ್ರಜೆಗಳಾಗಿ



ಮಿಯಾಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಉಚಿತ ಪುಸ್ತಕ ವಿತರಿಸಲಾಯಿತು.

• **ಕನ್ನಡಪ್ರಭ ವಾರ್ತೆ** ಹನುಮಸಾಗರ

ಸರ್ಕಾರಿ ಶಾಲೆಯ ಮಕ್ಕಳಿಗೆ ಸರ್ಕಾರದಿಂದ ಸಾಕಷ್ಟು ಸೌಲಭ್ಯ ದೊರೆಯುತ್ತಿದ್ದು, ಅವುಗಳನ್ನು ಉಪಯೋಗಿಸಿಕೊಂಡು ಚೆನ್ನಾಗಿ ಓದಬೇಕು ಎಂದು ಸಿಆರ್‌ಪಿ ಅಯ್ಯಪ್ಪ ಸುರಳ ಹೇಳಿದರು.

ಸಮೀಪದ ಮಿಯಾಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಉಚಿತ ಪಠ್ಯಪುಸ್ತಕ ವಿತರಿಸಿ ಮಾತನಾಡಿದರು. ಎರಡು ಜೊತೆ ಸಮವಸ್ತ್ರ ಬಿಸಿಯೂಟ, ಮೊಟ್ಟೆ, ಬಾಳೆಹಣ್ಣು, ವಿದ್ಯಾರ್ಥಿ ವೇತನ ಹೀಗೆ ನಾನಾ ರೀತಿಯ ಸೌಲಭ್ಯಗಳನ್ನು ಸರ್ಕಾರ ನೀಡುತ್ತಿದೆ. ವಿದ್ಯಾರ್ಥಿಗಳು ಗುಣಮಟ್ಟದ ಶಿಕ್ಷಣ ಪಡೆದು ಉತ್ತಮ ಪ್ರಜೆಗಳಾಗಬೇಕು ಎಂದರು.

ಗ್ರಾಪಂ ಅಧ್ಯಕ್ಷ ಶರಣಪ್ಪ ಮದ್ಲೂರು, ಎಸ್‌ಡಿಎಂಸಿ ಅಧ್ಯಕ್ಷ ನಾಗಪ್ಪ ಮಾದರ, ಸದಸ್ಯರಾದ ಗವಿಸಿದ್ದಪ್ಪ ಕುದುರಿ, ಶರಣಗೌಡ ಮ್ಯಾಗೇರಿ, ಮುಖ್ಯ ಶಿಕ್ಷಕ ಖಾಜಾಹುಸೇನ ಒಂಟೆಳಿ, ಟಾಟಾ ಟ್ರಸ್ಟ್‌ನ ಅಧಿಕಾರಿಗಳಾದ ರಾಜಕುಮಾರ್‌ಕುಂಬಾರ, ಬಸವರಾಜ ಹಾದಿಮನಿ, ಶಿಕ್ಷಕರಾದ ನಾಗನಗೌಡ ಪೊಲೀಸ್ ಪಾಟೀಲ, ಶಾಂತಾಬಾಯಿ ಪಟ್ಟಣಶೆಟ್ಟಿ, ಸದಾದು ಸುರಾಮ ಶಿರೂರ, ಪರಶಯ್ಯ ಶಿರೂರ, ಅಂಗನವಾಡಿ ಕಾರ್ಯಕರ್ತೆಯರಾದ ನಾಗರತ್ನ ವಾಲಿಕಾರ, ಜ್ಯೋತಿಲಕ್ಷ್ಮಿ ಬನಹಟ್ಟಿ, ಆಲಮ್ಮ ಹೊಸೂರು, ಪಾಲಕರಾದ ಶರಣಪ್ಪ ಚಿಕ್ಕೋಡಿ, ಸಿದ್ದಪ್ಪ ಮಣ್ಣೇರಿ, ನಾಗಪ್ಪ ರಾವಣಕಿ ಇತರರು ಇದ್ದರು.

ಕನ್ನಡಪ್ರಭ



ಹನುಮಸಾಗರದ ಸಮೀಪದ ಮಿಯ್ಯಾಪೂರ ಸರ್ಕಾರಿ ಪ್ರಾಥಮಿಕ ಶಾಲೆಯಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ವಿದ್ಯಾರ್ಥಿಗಳಿಗೆ ಉಚಿತ ಕನ್ನಡಕ ವಿತರಿಸಲಾಯಿತು. ಈ ವೇಳೆ ಶಾಲಾ ಸಿಬ್ಬಂದಿ, ಮಕ್ಕಳು ಇದ್ದರು.

KOPPAL Edition
Mar 31, 2024 Page No. 01
Powered by : eReleGo.com

# ಶಾಲಾ ಗ್ರಂಥಾಲಯಕ್ಕೆ 95 ಪುಸ್ತಕ ಕೊಡುಗೆ

**ಹನುಮಸಾಗರ(ತಾ:ಕುಷ್ಟಗಿ):** ಸಮೀಪದ ಮಿಯಾಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಗ್ರಂಥಾಲಯಕ್ಕೆ ಕಲಿಕಾ ಟಾಟಾ ಟ್ರಸ್ಟ್‌ನವರು 95 ಪುಸ್ತಕ ಕೊಡುಗೆಯಾಗಿ ನೀಡಿದರು.

ಶಾಲೆಯ ಮುಖ್ಯ ಶಿಕ್ಷಕ ಖಾಜಾಹುಸೇನ್ ಒಂಟೆಳಿ ಮಾತನಾಡಿ, ಕಲಿಕಾ ಟಾಟಾ ಟ್ರಸ್ಟ್‌ನವರು ಹಂತ-ಹಂತವಾಗಿ 3000ಕ್ಕೂ ಹೆಚ್ಚು ಪುಸ್ತಕ ನೀಡುವ ಗುರಿ ಹೊಂದಿದ್ದಾರೆ. ಪುಸ್ತಕಗಳು ವಿದ್ಯಾರ್ಥಿಗಳ ಬುದ್ಧಿಮಟ್ಟಕ್ಕೆ ತಕ್ಕಂತೆ ಇರುವುದರಿಂದ ಕತೆ, ಕವನ, ರಾಷ್ಟ್ರ ನಾಯಕರ ಚರಿತ್ರೆಯ ಪುಸ್ತಕಗಳು ಇರುವುದರಿಂದ ಚೆನ್ನಾಗಿ ಓದಿ ಅರ್ಥೈಸಿಕೊಂಡು ಜ್ಞಾನ ಸಂಗ್ರಹಕ್ಕೆ ಇದೊಂದು ಉತ್ತಮ ಸದಾವಕಾಶವೇ ಸರಿ ಎಂದರು.

ಶಿಕ್ಷಕರಾದ ನಾಗನಗೌಡ ಪೊಲೀಸ್ ಪಾಟೀಲ, ಶಾಂತಾಬಾಯಿ ಪಟ್ಟಣಶೆಟ್ಟಿ, ಪರಶುರಾಮಪ್ಪ ನಾಗಣ್ಣವರ, ಲಕ್ಷ್ಮೀ ವಾಲಿಕಾರ, ಸುಜಾತ ಗುಡಗಲದಿನ್ನಿ, ಗ್ರಂಥಾಲಯದ ಪ್ರೇರಕರಾದ ಸುಮಂಗಲಾ ಕುದುರಿ ಹಾಗೂ ಅನೇಕರು ಇದ್ದರು.



ಹನುಮಸಾಗರ ಸಮೀಪದ ಮಿಯಾಪುರ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಗ್ರಂಥಾಲಯಕ್ಕೆ ಕಲಿಕಾ ಟಾಟಾ ಟ್ರಸ್ಟ್‌ನವರು ಕೊಡುಗೆಯಾಗಿ ನೀಡಿದ 95 ಪುಸ್ತಕ ವಿದ್ಯಾರ್ಥಿಗಳು ಓದುತ್ತಿರುವುದು.